International Journal of Kannada Research
www.kannadajournal.com

ISSN: 2454–5813
IJKR 2021; 7(2): 93-102
© 2021 IJKR
www.kannadajournal.com
Received: 11-02-2021
Accepted: 15-03-2021

ಡಾ. ಆರ್. ವಿ. ಬಾಟಲ್
ಸೆಲ್ ಫೋನ್ ಶೋ ರೂಂ
ಬ್ಯಾಚುಲರ್ ಪದವಿ ಕಾಲೇಜು,
ವಿದ್ಯಾಗಿರಿ, ಧಾರವಾಡ, ಕರ್ನಾಟಕ,
ಭಾರತ

Corresponding Author:
ಡಾ. ಆರ್. ವಿ. ಬಾಟಲ್
ಸೆಲ್ ಫೋನ್ ಶೋ ರೂಂ
ಬ್ಯಾಚುಲರ್ ಪದವಿ ಕಾಲೇಜು,
ವಿದ್ಯಾಗಿರಿ, ಧಾರವಾಡ, ಕರ್ನಾಟಕ,
ಭಾರತ

# ಜನಪದರ ನಂಬಿಕೆಗಳು : ಒಂದು ಅಧ್ಯಯನ

**ಡಾ. ಆರ್. ವಿ. ಪಾಟೀಲ**

**ಪ್ರಸ್ತಾವನೆ:**
ರಹಸ್ಯಮಯವಾದ ಸೃಷ್ಟಿಯು ದೈವಲೀಲೆಯಿಂದ ಹುಟ್ಟಿಕೊಂಡಿದೆ ಎಂದು ಜನಸಾಮಾನ್ಯರು ನಂಬಿಕೊಂಡು ಬಂದಿದ್ದಾರೆ ಇಂಥ ವಿಸ್ಮಯಕಾರಿಯಾದ ಜಗತ್ತಿನಲ್ಲಿ ಮನುಷ್ಯನು ಅತಿಮಾನುಷ ಶಕ್ತಿಗಳನ್ನು 'ದೇವರೆಂದು' ಮಾರಕವಾದ ಶಕ್ತಿಗಳನ್ನು 'ಸೈತಾನ-ದೆವ್ವ' ಎಂದು ನಂಬಿ ಅವುಗಳಿಗೆ ಸಾಂಕೇತಿಕ ಹೆಸರುಗಳಿಂದ ಆರಾಧಿಸುವ ಪರಂಪರೆಯನ್ನು ರೂಪಿಸಿಕೊಂಡು ಬಂದನು. ಹೀಗೆ ರೂಢಿಸಿಕೊಂಡು ಬಂದ ಆಚಾರಗಳೆ ಜನಪದರಲ್ಲಿ ನಂಬಿಕೆಗಳಾಗಿ ಬಲಗೊಂಡವು. ದೇಶ ಪ್ರದೇಶವಾರು ಭಿನ್ನ-ಭಿನ್ನ ಆಚಾರ-ವಿಚಾರಗಳು ಹುಟ್ಟಿಕೊಂಡವು. ನಂಬಿಕೆಗಳು ಹೇಗೆ ಹುಟ್ಟಿದವು, ಯಾಕೆ ಹುಟ್ಟಿದವು ಎಂದು ನಿಖರವಾಗಿ ಹೇಳುವುದು ಅಸಾಧ್ಯ. ಏಕೆಂದರೆ ನಂಬಿಕೆಗೂ ಮಾನವನಿಗೂ ಅವಿನಾಭಾವ ಸಂಬಂಧವಿದೆ. ನಂಬಿಕೆ ಇಲ್ಲದವನು ಬದುಕಲು ಸಾಧ್ಯವಿಲ್ಲ. ಸಾಮಾನ್ಯವಾಗಿ ಜನಪದರು ನಿತ್ಯ ತಮ್ಮ ವ್ಯವಹಾರಿಕ ಜೀವನದ ಸಂದರ್ಭದಲ್ಲಿ ಮಾತನಾಡಿಕೊಳ್ಳುವುದನ್ನು ಕೇಳಿದರೆ-ನಂಬಿಕೆ ಇರಬೇಕು, ನಂಬು, ನಂಬಿಕೆ ಇಲ್ಲದಿದ್ರ ಆಗುವುದಿಲ್ಲ. ಅವನಿಗೆ ನಂಬಿಕಿಲ್ಲ ಬಿಡ್ರಿ, ನಂಬಿ ಕೆಟ್ಟವರಿಲ್ಲ ಎಂಬ ಗಾದೆಮಾತಿನೊಂದಿಗೆ-'ನಂಬಿ ಕರದೊಡೆ ಓ ಎನ್ನನೆ ಶಿವನು'. ಎಂಬ ವಚನದಂತೆ ನಮ್ಮ ಗ್ರಾಮೀಣ ಊರುಗಳಲ್ಲಿ ಜನರು ನಂಬಿಕೆ ಕುರಿತು ಮಾತನಾಡುತ್ತಾರೆ. ಗ್ರಾಮಗಳಲ್ಲಿ ವಾಸಿಸುವ ಜನರಿಗೆ 'ನಂಬಿಕೆ ಎಂಬುದು ತುಂಬಾ ಮಹತ್ವ ಪಡೆದುಕೊಳ್ಳುತ್ತದೆ ಯಾವುದಾದರೂ ವ್ಯವಹಾರದಲ್ಲಿ ನೋಡಪಾ ನನ್ನ ಮ್ಯಾಗ ನಂಬಿಕೆ ಇದ್ರ ವ್ಯವಹಾರ ಮಾಡು ಇಲ್ಲಂದ್ರ ಬ್ಯಾಡ, ಮನುಷ್ಯಾಗ ನಂಬಿಕೆ ಭಾಳ ಮುಖ್ಯ ಅನ್ನುವುದಾಗಲಿ, ನಾ ನಂಬಿದವರಿಗೆ ಎರಡು ಬಗೆಂಗಿಲ್ಲಪ್ಪಾ ಎನ್ನವುದಾಗಲಿ, ಏ ಅಂವಾ ಬಾಳ ನಂಬಿಕಸ್ಥ ಮನಷ್ಯಾರಿ! ಎಂಬಂತಹ ನಂಬಿಕೆ ಕುರಿತು ದಿನ ನಿತ್ಯ ಜನಪದರ ಬಾಯಲ್ಲಿ ಕೇಳುವುದುಂಟು. ಜನಪದರ ಹಾಡುಗಳಲ್ಲಿ ನಂಬಿ ಕೆಟ್ಟ ಮ್ಯಾಲ ನರ ಮನುಷ್ಯನಾಗಿ ಬಾಳಬಾರ್ದು ಎಂದು ಭಜನೆ ಹಾಡುಗಳಲ್ಲಿ ಹೀಗೆ ಜನಪದರು ನಂಬಿಕೆ ಕುರಿತು ತುಂಬಾ ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದನ್ನು ಇಂದಿಗೂ ಕಾಣಬಹುದು

**ಅಧ್ಯಯನದ ಉದ್ದೇಶ ಮತ್ತು ವಿಧಾನ :**
ಜನಪದರು ಅನುಸರಿಸಿಕೊಂಡು, ಆಚರಿಸಿಕೊಂಡು ಬಂದಿರುವ ನಂಬಿಕೆಗಳ ಅರ್ಥ, ಮಹತ್ವ ಹಾಗೂ ವಿಶೇಷತೆ ತಿಳಿಯುವುದು. ಜನಪದರ ನಂಬಿಕೆಗಳನ್ನು ಸಂಗ್ರಹಿಸಿ ವೈಜ್ಞಾನಿಕವಾದ ದೃಷ್ಟಿಕೋನದಲ್ಲಿ ಅಧ್ಯಯನ ಮಾಡುವುದು.
ಪ್ರಸ್ತತ ಅಧ್ಯಯನವನ್ನು ಪ್ರಮುಕವಾಗಿ ಪ್ರಾಥಮಿಕ ದತ್ತಾಂಶವನು ಆದರಿಸಿದೆ. ಕ್ಷೆತ್ರಕಾರ್ಯ, ಸಂದರ್ಶನ ಹಾಗೂ ಈ ವಿಷಕ್ಕೆ ಸಂಬಂಧಿಸಿದ ಬರಹಗಳ ಅವಲೋಕನದೊಂದಿಗೆ ಪ್ರಸ್ತುತತ ಅಧಯನವನು ನಡೆಸಲಾಗಿದೆ.

**ಪೂರ್ವ ಅಧ್ಯಯನಗಳ ಅವಲೋಕನ :**
ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ೨೩ನೇ ಅಖಿಲ ಕರ್ನಾಟಕ ಜಾನಪದ ಸಮ್ಮೇಳನವನ್ನು ಕೆ.ಆರ್.ಬೆಲ್ಲದ ಕಾಲೇಜು ಮುಂಡರಗಿಯಲ್ಲಿ ಫೆಬ್ರವರಿ೧೮-೧೯-೧೯೯೬ರಂದು ಡಾ.ಎಂ.ಜಿ.ಬಿರಾದಾರ ಅವರ ಅಧ್ಯಕ್ಷತೆಯಲ್ಲಿ ನಡೆಸಿದ ಡಾ.ಎಂ.ಬಿ.ನೇಗಿನಾಳ, ಡಾ.ಮ.ಗು.ಬಿರಾದಾರ, ಎ.ವ್ಹಿ.ನಾವೆಡ, ಡಾ.ವಿಲ್ಯಂ ಮಾಡ್ತಾ, ಪುರುಷೋತ್ತಮ ಬಿಳಿಮಲೆ, ಡಾ.ಹರಿಲಾಲ ಪವಾರ, ಶ್ರೀ.ನಾರಾಯಣಸ್ವಾಮಿ, ಡಾ.ಮಧು ವೆಂಕಾರೆಡ್ಡಿ, ಡಾ.ವೀರಣ್ಣ ದಂಡೆ, ಶ್ರೀ.ಎಸ್.ಬಿ.ಭರಮಗೌಡರ,

ಡಾ.ಶ್ರೀಕಂಠ ಕೂಡಗೆ, ಡಾ.ಬಿ.ಬಿ.ಬಿರಾದಾರ ಹೀಗೆ ಹಲವಾರು ವಿದ್ವಾಂಸರ ಮೂಲಕ ನಂಬಿಕೆಗಳ ವಿವಿಧ ಆಯಾಮಗಳ ಪ್ರಬಂಧ ಮಂಡನೆಯೊಂದಿಗೆ ಸಮ್ಮೇಳನ ನಡೆಸಿ ಜಾನಪದ ಸಾಹಿತ್ಯ ದರ್ಶನ ಭಾಗ-೨೩ ಜನಪದ ನಂಬಿಕೆಗಳ ಕೃತಿಯನ್ನು ಪ್ರಸಾರಂಗ ಪ್ರಕಟಿಸಿತು. ಹೀಗೆ ನಂಬಿಕೆ ಕುರಿತ ಅಧ್ಯಯನಗಳ ಅಲ್ಲಲ್ಲಿ ನಡೆದಿವೆ. ಇಂಥ ಅಧ್ಯಯನಕ್ಕೆ ೧೯೭೩ಿದ ದಶಕದ ಶಿವರಾಮ ಕಾರಂತ, ಜಯದೇವಿತಾಯಿ ಲಿಗಾಡೆ, ದೆ.ಜವರೇಗೌಡ, ಆರ್.ಸಿ.ಹಿರೇಮಠ, ಹಾ.ಮಾ.ನಾಯಕರಂತ ವಿದ್ವಾಂಸರ ಅಧ್ಯಯನದ ಪ್ರೇರಣೆಯೊಂದಿಗೆ ನಂಬಿಕೆಗಳ ಅಧ್ಯಯನಗಳು ರಾಷ್ಟ್ರೀಯ ಮಟ್ಟದಲ್ಲಿ ನಡೆದ ದಾಖಲೆಗಳಿವೆ. ಆರ್.ಎಸ್. ಭಾಗ್ಸ, ಮರಿಯಾ ಲೀಚ್ ರಂತ ಹಲವು ಪಾಶ್ಚಾತ್ಯ ವಿದ್ವಾಂಸರು ನಂಬಿಕೆ ಕುರಿತು ಅಧ್ಯಯನ ಮಾಡಿ ತಮ್ಮದೆ ಆದ ವಿಚಾರಗಳನ್ನು ಮಂಡಿಸಿರುವರು. ಅಂತ ಪ್ರಮುಖ ವಿಚಾರಗಳನ್ನು ಉದಾಹರಣೆಯೊಂದಿಗೆ ನಿರ್ವಚನಾತ್ಮಕ ವ್ಯಾಖ್ಯೆಗಳನ್ನು ನಂಬಿಕೆಗಳ ಅಧ್ಯಯನದ ಪೂರಕವಾಗಿ ಗಮನಿಸಬಹುದು. ಮರಿಯಾ ಲೀಚ್ ಹೇಳುವಂತೆ 'ಪುನರಾವೃತವಾಗುವ ಸಾಮೂಹಿಕ ವೀಕ್ಷಣೆಯ ಫಲವಾಗಿ ಮಾಡುವ, ಭೂತ, ವರ್ತಮಾನ. ಭವಿಷ್ಯತ್‌ಗಳೊಂದಿಗೆ ಕಾರ್ಯ ಕಾರಣ ಸಂಬಂಧ ಹೊಂದಿರುವ ಸಾಂಪ್ರದಾಯಿಕ ಸುಕೃತ ಪರಿಕಲ್ಪನೆಯೇ ಜನಪದ ನಂಬಿಕೆಯಾಗಿರುವುದು'. ಪ್ರೊ.ದೇ.ಜವರೇಗೌಡರು-"ದೇಶ ಕಾಲಗಳ ಹಿನ್ನಲೆಯಲ್ಲಿ ಪರಂಪರಾಗತವಾದ ಜ್ಞಾನ, ದೀರ್ಘಾನುಭವ, ಕಾಲ್ಪನಿಕ ಆಲೋಚನೆಗೆ ಹಾಗೂ ಅತಿಂದ್ರೀಯ ವ್ಯಾಪಾರದ ಫಲವಾಗಿ ಮಾಡಿದ ಶ್ರದ್ಧೆಯೇ ನಂಬಿಕೆ" ಎಂದು ಹೇಳಿರುವರು.

ಆರ್.ಎಸ್.ಬಾಗ್ಸ್‌ರವರು; 'ನಂಬಿಕೆಗಳು ಪುನರಾವೃತವಾಗುವ ಸಾಮೂಹಿಕ ವೀಕ್ಷಣೆಯ ಫಲವಾಗಿ ಮಾಡುವ ಕಾರ್ಯ ಕಾರಣ ಸಂಬಂಧ ಉಳ್ಳದ್ದಾಗಿರುವ ಸಾಂಪ್ರದಾಯಿಕ ಭಾವನೆ ಎಂದು ನಂಬಿಕೆಗಳು ವೈಜ್ಞಾನಿಕ ದೃಷ್ಟಿಕೋನದ ಮೂಲಕ ಹೇಳ ಹೊರಟಿದ್ದಾರೆ'. ನಿಸರ್ಗದಲ್ಲಿ ನಡೆಯುವ ರಹಸ್ಯವನ್ನು ಅರಿಯುವಲ್ಲಿ ಮನುಷ್ಯನ ಕುತೊಹಲತೆಯ ಪ್ರಯತ್ನದಿಂದ ಹುಟ್ಟು ಸಾವಿನ ನಿಗೂಢತೆಯನ್ನು ಅರ್ಥೈಸಲಾಗದ ಭಕ್ತಿ-ಭಯ, ಜಾತಿ ಮತ್ತು ಧರ್ಮದಿಂದ ತಮ್ಮ ಅಸ್ತಿತ್ವಕ್ಕಾಗಿ ನಡೆಸಿದ ಹೋರಾಟ, ತನ್ನನ್ನು ಮೀರಿ ನಡೆಯುವ ಶಕ್ತಿಯ ಹಿನ್ನೆಯಲ್ಲಿ ನಂಬಿಕೆಗಳು ಮೂಡಿಬಂದವು.

**ಜನಪದ ನಂಬಿಕೆಗಳ ವಿಶ್ಲೇಷಣೆ :**

ಹರಿಯ ಬಸುರಿನಲ್ಲಿ ಬ್ರಹ್ಮಾಂಡವಡಗಿರುವಂತೆ ಜನಪದರ ನಂಬಿಕೆಯಲ್ಲಿ ಸೃಷ್ಠಿಯ ಸಕಲ ವಿಷಯಗಳೆಲ್ಲವೂ ಒಳಗೊಂಡಿವೆ. ಆ ನಂಬಿಕೆಗಳ ಕುರಿತು ಇಲ್ಲಿ ವಿಶ್ಲೇಷಿಸಲಾಗಿದೆ.

**ನಂಬಿಕೆಯ ವಿಧಗಳು :**

ನಂಬಿಕೆಗಳ ಸ್ವರೂಪ ಹಾಗೂ ಕಾರ್ಯವನ್ನು ಅನುಸರಿಸಿ ಈ ರೀತಿ ಆರ್.ಎಸ್.ಬಾಗ್ಸ್ ಅವರು ವಿಭಾಗಿಸಿರುವರು ಪುರಾಣ, ಐತಿಹ್ಯ, ಪದ್ಧತಿ, ಮಾಂತ್ರಿಕತೆ, ವೈದ್ಯ, ಕಾಲಜ್ಞಾನ ಎಂದು ವಿಭಾಗಿಸಿದ್ದಾರೆ. ವೇಲ್ಯಾಂಡ್ ಅವರು; ಮನುಷ್ಯ ಶರೀರ ಹಾಗೂ ವೈದ್ಯಕ್ಕೆ ಸಂಬಂಧಿಸವು, ಜೀವನ ಚಕ್ರಕ್ಕೆ ಸಂಬಂಧಿಸಿದವು, ಆರ್ಥಿಕ ಮತ್ತು ಸಾಮಾಜಿಕ ಸಂಬಂಧಗಳು, ಮಾಟ ಮತ್ತು ಮಂತ್ರವಿದ್ಯೆ, ಭೂತಪ್ರೇತ, ಸಾವು ಮುಂತಾದವುಗಳಿಗೆ ಸಂಬಂಧಿಸಿದವು, ಸಂಖ್ಯೆಗಳು ಮತ್ತು ಖಗೋಳ ಸಂಗತಿಗಳು, ಬೇಸಾಯಕ್ಕೆ ಸಂಬಂಧಿಸಿದವು. ಹವಾಮಾನ, ಕೃಷಿ, ಬೇಟೆ, ಮೀನುಗಾರಿಕೆ ಕೆಲಸ ಕಾರ್ಯವನ್ನು ನಂಬಿಕೆಗಳು ಅವಲಂಬಿಸಿವೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಶ್ವಕೋಶದ ವಿಭಜನ ಮಾದರಿ ಸ್ಥೂಲ ವಿಭಾಗ ಕ್ರಮವನ್ನು ಹೀಗೆ ಮಾಡಿರುವರು. ೧)ಅತಿಮಾನುಷ ೨)ಮಾನುಷ ೩)ಪ್ರಾಣಿ ೪)ಪ್ರಕೃತಿ ೫)ಕೌಟುಂಬಿಕ ೬) ಸಂಕೀರ್ಣ. ದೇ.ಜವರೇಗೌಡ ಅವರು ನಂಬಿಕೆಗಳನ್ನು ಹತ್ತು ಗುಂಪಾಗಿ ವಿಂಗಡಿಸಿದ್ದಾರೆ.(೧೯೮೬ :೧೦೭)೧)ಧಾರ್ಮಿಕ ನಂಬಿಕೆಗಳು ೨)ಐತಿಹ್ಯಾತ್ಮಕ ನಂಬಿಕೆಗಳು ೩)ಗೃಹ ನಂಬಿಕೆಗಳು ೪)ವೈದ್ಯಕೀಯ ನಂಬಿಕೆಗಳು ೫)ಔದ್ಯೋಗಿಕ ನಂಬಿಕೆಗಳು ೬)ನೈಸರ್ಗಿಕ ನಂಬಿಕೆಗಳು ೭)ಪ್ರಾಣಿ ನಂಬಿಕೆಗಳು ೮)ಮಂತ್ರ ಸಂಬಂಧಿ ನಂಬಿಕೆಗಳು ೯)ಜ್ಯೋತಿಷ್ಯಾತ್ಮಕ ನಂಬಿಕೆಗಳು ೧೦)ಸಂಕೀರ್ಣ ನಂಬಿಕೆಗಳು.

**ಬೌದ್ಧಿಕ ನಂಬಿಕೆಗಳು:**

ಬೌದ್ಧಿಕ ನಂಬಿಕೆಗಳನ್ನು ಎರಡು ವಿಧದಲ್ಲಿ ವಿಂಗಡಿಸಬಹುದು. ೧)ಧಾರ್ಮಿಕ ನಂಬಿಕೆಗಳು ೨) ಸಾಂಸ್ಕೃತಿಕ ನಂಬಿಕೆಗಳು

**ಧಾರ್ಮಿಕ ನಂಬಿಕೆಗಳು:**

ಮಾನವ ಮನಸ್ಸಿನ ಭಯ ಮತ್ತು ಆತಂಕಗಳು ಈ ಬಗೆಯ ಧಾರ್ಮಿಕ ನಂಬಿಕೆಗಳಿಗೆ ಮೂಲ. ಇಂತಹ ಸಂಧರ್ಭಗಳಲ್ಲಿ ಅವನಿಗೆ ಸಂಬಂಧಿಸಿ ಹುಟ್ಟಿಕೊಂಡವುಗಳು. ದೇವರು, ದೆವ್ವಗಳು. ಆಗ ದೇವರ ಸ್ವರೂಪ, ಕಾರ್ಯಗಳಿಗೆ ದೇವರ ಸ್ವೂರೂಪ ಸಂಬಂಧಿಸಿದಂತೆ ಅನೇಕ ನಂಬಿಕೆಗಳನ್ನು ಹುಟ್ಟುಹಾಕಿದ. ಅಮೂರ್ತ ದೇವರನ್ನು ವಾಸ್ತವ ಜಗತ್ತಿನ ವಸ್ತು ವಿಷಯಗಳೊಂದಿಗೆ ಸಮೀಕರಿಸಿ ಪೂಜಿಸತೊಡಗಿದ. ಉದಾಹರಣೆ ತೆಂಗಿನಕಾಯಿಯನ್ನು ಕಾಲಿನಿಂದ ತುಳಿಯಬಾರದು. ಅದು ಮುಕ್ಕಣ್ಣ. ಬೀಸುವ ಕಲ್ಲನ್ನು ತುಳಿಯಬಾರದು ಅದು ಲಕ್ಷ್ಮಿ. ಲೌಕಿಕ ಕ್ರಿಯೆಯೊಂದನ್ನು ಸಮರ್ಪಕವಾಗಿ ಮಾಡಲುಯ ಅಥವಾ ನಿಷೇಧಿಸಲು ಅದಕ್ಕೆ ಧಾರ್ಮಿಕ ಚೌಕಟ್ಟನ್ನು ಒದಗಿಸುವುದುಂಟು. ಉದಾಹರಣೆಗೆ ಕಾಲನ್ನು ತೊಳೆಯುವಾಗ ಹಿಮ್ಮಡ ಪೂರ್ತಿ ನೆನೆಯಬೇಕು. ಇಲ್ಲದಿದ್ದರೆ ಶನಿ ಹಿಡಿದುಕೊಳ್ಳುತ್ತದೆ. ಕಸಗುಡಿಸಿ ಹೊರ ಹಾಕಬಾರದು. ಲಕ್ಷ್ಮಿ ಹೊರಟು ಹೋಗುತ್ತಾಳೆ. ಮೊದಲನೆಯದರಲ್ಲಿನ ಲೌಕಿಕ ಉದ್ದೇಶ ಕಾಲನ್ನು ಸ್ವಚ್ಛವಾಗಿ ತೊಳೆದುಕೊಳ್ಳಬೇಕು. ಎರಡನೆದು ಕತ್ತಲೆಯಲ್ಲಿ ಕಸದೊಂದಿಗೆ ಬೆಲೆಬಾಳುವ ವಸ್ತುಗಳೂ ಹೋಗಬಹುದು ಎಂಬ ಉದ್ದೇಶವಿರಬಹುದು.

ಹೊಟ್ಟೆನೋವು ಮತ್ತು ಹೊಟ್ಟೆ ಉಬ್ಬಿದಾಗ ಹೊಸ್ತಿಲದ ಎಡಭಾಗದ ಮೇಲೆ ಬೂದಿ ಹಾಕಿ, ಅದರ ಮೇಲೆ ಎಡಗಾಲಿಟ್ಟು ಮೂರು ಸಾರಿ ತಿರುಗಿ ಉಜ್ಜಿ ಆ ಬೂದಿಯನ್ನು ಸವರಿ, ಇಳೇದಗಿದು ತಿನ್ನಿಸಿದರೆ ಗುಣಮುಖವಾಗುವುದು. ಗಂಡನೊಂದಿಗೆ ಕೆಂಡವಾದರೆ ಸ್ವರ್ಗಸುಖ ಸಿಗುತ್ತದೆ ಎಂಬುದು ವೇದಕಾಲದ ಸ್ತ್ರೀಹರಣ ದ್ಯೋತಕವಾಗಿ ಪ್ರಚಲಿತದಲ್ಲಿದ್ದ ಸತಿಪದ್ಧತಿಯನ್ನು ಪ್ರೋತ್ಸಾಹಿಸಲು ಹುಟ್ಟಿಕೊಂಡ ನಂಬಿಕೆಯಾಗಿದೆ. 'ಗಂಡ ಸತ್ತ ನಂತರ ಹೆಂಡತಿ ಚಿತೆಯ ಹಾಸಿಗೆಯ ಮೇಲೆ ಮಲಗಬೇಕು ಎಂಬ ಕಟ್ಟಳೆ ನಂಬಿಕೆಯಾಗಿ ಬೆಳೆದು ಬಂದಿತು. ಬಾವಿಗೆ ನೀರು ಬರದಿದ್ದರೆ ಮಕ್ಕಳನ್ನು ಬಲಿಕೊಡಬೇಕು. ಬುನಾದಿ ಭದ್ರವಾಗಲು ಹಸುಳೆಗಳನ್ನು ಆಹುತಿ ಕೊಡಬೇಕು, ಕೆರೆಯಲ್ಲಿ ನೀರು ಬರದಿರಲು ಕಿರಿಸೊಸೆಯನ್ನು ಹಾರಕೊಡಬೇಕು, ಎಂಬಂತಹ ನಂಬಿಕೆಗಳು ಮಾನವನ ರಾಕ್ಷಸಿ ಮನೋಬಾವನೆಯಾಗಿದೆ. ಅಜ್ಞಾನಕ್ಕೆ ಅಂಧಕಾರಕ್ಕೆ ಸಾಕ್ಷಿಯಾಗಿವೆ. ಸಿಡಿ ಆಡುವ, ಬೆತ್ತಲೆಸೇವೆ ಮಾಡುವ, ನಾಯಿಯಂತೆ ಬೊಗಳುವ, ದಿಂಡರಕಿ ಉಳ್ಳುವ, ಎಂಜಲು ಎಲೆ ಮೇಲೆ ಉರುಳುವ, ಗುಂಡು ಹೊಡೆದುಕೊಳ್ಳುವ ನೂರಾರು ನಂಬಿಕೆಗಳು ಅಜ್ಞಾನದ, ಮೌಢ್ಯತೆಯ ಅವತಾರಗಳಾಗಿವೆ. ಮೈಯ್ಯಲ್ಲಿ ದೇವರು ಬಂದವರಂತೆ ನಟಿಸಿ ಮಾಟ ಮಂತ್ರ, ಚೀಟಿ, ತಾಯತಗಳನ್ನು ರಟ್ಟೆಗೆ ಕಟ್ಟಿ ಕುರುಡು ನಂಬಿಕೆಗಳಿಗೆ ಹುಟ್ಟುಹಾಕಿ ಜನಸಾಮಾನ್ಯರನ್ನ

ದುರುಪಯೋಗ ಪಡಿಸಿಕೊಳ್ಳುತ್ತಾರೆ. ಇಂಥ ನಂಬಿಕೆಗಳನ್ನು ನಂಬಬಾರದು.

ಸಾವಿನ ಮನೆಗೆ ಹೋದವರು ಸ್ನಾನ ಮಾಡಿ ಒಳಗೆ ಬರಬೇಕು, ಬಂಜೆಯರು ಅರಳಿ/ಬಸರಿಮರ ಸುತ್ತುವರೆದರೆ ಮಕ್ಕಳಾಗುವವು. ಇಂಥ ನಂಬಿಕೆಗಳನ್ನು ಆಚರಿಸುವುದರಿಂದ ಯಾವ ಅಪಾಯವೂ ಇಲ್ಲ. ಸಾಮಾನ್ಯವಾಗಿ ಸಾವು ಸೂತಕವೆಂಬ ನಂಬಿಕೆಯಿದೆ. ಹೆಣದ ಪರಿಸರದಲ್ಲಿ ಸಾವಿಗೆ ಕಾರಣವಾದ ರೋಗವರ್ಧಕ ಕ್ರಿಮಿಗಳು ಇರಲು ಸಾಧ್ಯವಿದೆ. ಸ್ಮಶಾನಕ್ಕೆ ಹೋದಾಗ ರೋಗ ಕ್ರಿಮಿಗಳ ಜೊತೆಗೆ ಸ್ಮಶಾನದಲ್ಲಿಯ ಧೂಳು ಕಾಲಿಗೆ ಅಂಟಿಕೊಂಡಿರುತ್ತದೆ. ಆದ್ದರಿಂದ ಶವ ಸಂಸ್ಕಾರ ಮಾಡಿ ಬರುವಾಗ ಕೈಕಾಲು ಮುಖ ತೊಳೆಯುವದು. ಮಡಿವಂತಿಕೆಯ ಲಕ್ಷಣವಾದರೂ, ತಲೆಯ ಮೇಲೆ ನೀರು ಹಾಕಿ ಚೆನ್ನಾಗಿ ಸ್ನಾನ ಮಾಡುವದು ಇನ್ನೂ ಕ್ಷೇಮಕರ. ಅದನ್ನು ಬಿಟ್ಟು ಶಾಸ್ತ್ರ ಮನಸ್ಸಿನಿಂದ ತಲೆಯ ಮೇಲೆ ಮೂರು ಬಾರಿ ನೀರು ಚಿಮಕಿಸಿ ಸೂತಕ ಕಳೆದುಕೊಳ್ಳುವುದು. ಕೇವಲ ಮನಸ್ಸಿನ ಸಮಾಧಾನಕ್ಕೆ ಮಾತ್ರ. ಬಂಜೆಯರು ಅರಳಿಮರ ಸುತ್ತುವರೆದರೆ ಮಕ್ಕಳಾಗುವುದೆಂಬುದು ಆರೋಗ್ಯದಾಯಕ ನಂಬಿಕೆ. ಯಾಕೆಂದರೆ ಅರಳಿಮರದ ಗಾಳಿ ಗರ್ಭಕೋಶದ ರೋಗಗಳನ್ನು ನಾಶಪಡಿಸುವ ಗುಣ ಪಡೆದಿದೆ ಎಂಬುದು ವೈಜ್ಞಾನಿಕ ಅಭಿಪ್ರಾಯ. ಗಿಡ ಸುತ್ತುಹಾಕಿ ಬಂದು ಬಾಗಿ ನಮಸ್ಕರಿಸುವಾಗ ಕಿಬ್ಬೊಟ್ಟೆಗೆ ಒಂದು ರೀತಿ ವ್ಯಾಯಾಮ ಸಿಕ್ಕು, ಗರ್ಭಕೋಶದ ಕೊರತೆ ಪೀಡೆಗಳು ದೂರಾಗಿ ಗರ್ಭಧರಿಸುವ ಸಂಭವವಿರುತ್ತದೆ. ಬಂಜೆಯರ ಬಯಕೆಗೆ ಪೂರಕ ಪುರಾವೆ ಒದಗಿಸುವ ಆರೋಗ್ಯದಾಯಕ ನಂಬಿಕೆ ಇದಾಗಿದೆ. ತೀರ್ಥ ತಿರಸ್ಕರಿದರೆ ದೆವ್ವ ಕನಸಿನಲ್ಲಿ ಬರುವುದು. ಇದೊಂದು ಉತ್ತಮ ನಂಬಿಕೆ. ತೀರ್ಥದ ಪಾತ್ರೆಯಲ್ಲಿ ತುಳಸೀ ದಳ ಇರುವುದು ಆರೊಗ್ಯಕ್ಕೆ ಒಳ್ಳೆಯದು. ತುಂಬಿದ ಗರ್ಭಿಣಿಯರು ಹೆಣದ ಸಂಗಡ ಸ್ಮಶಾನಕ್ಕೆ ಹೋಗಬಾರದು, ಮೊದಲು ಬೆಳೆದ ಧಾನ್ಯವನ್ನು ದೇವಸ್ಥಾನಕ್ಕೆ ಕೊಡಬೇಕು, ಗಣಪತಿಯ ಎಡೆಯನ್ನು ಹೆಂಗಸರು ಉಂಡರೆ ಬಂಜೆಯರಾಗುವರು, ಗುಳ್ಳವ್ವನ ಎಡೆಯನ್ನು ಗಂಡಸರು ಉಂಡರೆ ಮೀಸೆ ಬರುವುದಿಲ್ಲ, ಕಾಮಣ್ಣನ ಬೆಂಕಿಯಲ್ಲಿ ಕಡ್ಲಿ ಸುಟ್ಟು ತಿಂದರೆ ಹಲ್ಲು ಗಟ್ಟಿಯಾಗುವವು, ಬಂಜೆಯರು ಹನುಮಪ್ಪನಿಗೆ ನಡೆದುಕೊಂಡರೆ ಮಕ್ಕಳಾಗುವುದು. ಇವನ್ನು ಯಾವ ನಂಬಿಕೆಗಳೆಂದು ಹೇಳಬೇಕೊ ಓದುಗರೆ ನಿರ್ಧರಿಸಿ.

**ಸಾಂಸ್ಕೃತಿಕ ನಂಬಿಕೆಗಳು :**

ಚಿಕ್ಕ ವಯಸ್ಸಿನಲ್ಲಿ ಮದುವೆಯಾದ ಹೆಣ್ಣು ಗಂಡಿನ ಮನೆಯಲ್ಲಿ ಋತುಮತಿಯಾದರೆ ಅಂದಿನಿಂದ ಪ್ರಸ್ತದವರೆಗೂ ಗಂಡ ಹೆಂಡತಿಯ ಮುಖ ನೋಡಬಾರದು. ಮದುವೆಯಾದ ಒಂದು ವರ್ಷದ ಒಳಗಾಗಿ ಅತ್ತೆ ಅಳಿಯನಿಗೆ ಊಟಕ್ಕೆ ನೀಡಬಾರದು. ಪ್ರಸ್ತದ ದಿನ ರಾತ್ರಿ ದೀಪ ನಂದದಂತೆ ನೋಡಿಕೊಳ್ಳಬೇಕು. ಗಂಡು ಹೆಣ್ಣು ನಾಚದೆ ಪರಸ್ಪರರ ಮುಖದ ಮೇಲಿನ ಪ್ರತಿಕ್ರಿಯೆಯನ್ನು ತಿಳಿಯಲು, ಮುಖದ ಸೌಂದರ್ಯವನ್ನು ನೋಡಿ ಆನಂದಿಸಲು, ಲಜ್ಜಾಭಾವ ತೊರೆದು ಮಾನಸಿಕವಾಗಿ ಹತ್ತಿರವಾಗಲು ಇಂಥ ನಂಬಿಕೆಗಳು ಹುಟ್ಟಿರಬೇಕು. ಟೆಂಗಿನಕಾಯಿ ಒಡೆಯುವಾಗ ತೊಟ್ಟಲಗಾಯಿ ಒಡೆದರೆ ಹೆಣ್ಣು ಮಗು ಹುಟ್ಟವುದು. ಫಲ ತಾಂಬೂಲಾದಿಗಳನ್ನು ಗಂಡ ಹೆಂಡತಿಯ ಉಡಿಯಲ್ಲಿ ಹಾಕಿದರೆ ಹೆಂಡತಿ ಫಲವತಿಯಾಗುವಳು, ಇವೆಲ್ಲ ಜನಪದರ ವಯಕ್ತಿಕ ನಂಬಿಕೆಗಳೆಂದೇ ಹೇಳಬಹುದು.

ಹೆಣ್ಣು ಮಕ್ಕಳ ಚೊಚ್ಚಿಲು ಹೆರಿಗೆ ತವರುಮನೆಲ್ಲಿಯೇ ಆಗಬೇಕು. ಚೊಚ್ಚಿಲು ಹೆರಿಗೆ ತುಂಬಾ ಅಪಾಯಕಾರಿದುದು. ಅದು ಅವಳ ಪಾಲಿಗೆ ಮರುಹುಟ್ಟು ಪಡೆದಂತೆ ಎಂಬ ನಂಬಿಕೆ. ಮಕ್ಕಳನ್ನು ಆಡಿಸುವಾಗ, ಮಡಿಲಲ್ಲಿ ಕುಣಿಸುವಾಗ ಹೊಟ್ಟೆಗೆ ಪೆಟ್ಟು ಬೀಳದಿರಲೆಂಬ ಕಾರಣದಿಂದ ಗರ್ಭಿಣಿಯರು ಮಕ್ಕಳನ್ನು ಎತ್ತಿಕೊಳ್ಳಬಾರದು, ಎಂಬ ನಂಬಿಕೆಯು ರೂಢಿಯಲ್ಲಿರಬೇಕು. ಅದೇ ರೀತಿಯಲ್ಲಿ ಒಲೆ ಹಾಗೂ ಕೊಳ್ಳಿಗೆ ನೀರು ಹಾಕುವಾಗ ಅದರಿಂದ ಏಳುವ ಹೊಗೆ, ಅಡಿಗೆ ಮಾಡುವಾಗ ಹೊಗೆಯಿಂದ ಕೆಮ್ಮು, ಕಣ್ಣೀರು ಬರುವುದು, ತಲೆ ತಿರುಗುವ ತೊಂದರೆಗಳು ಆಗಬಾರದೆಂದು; ಬಸುರಿ ಉರಿಯುವ ಕೊಳ್ಳಿಗೆ ನೀರು ಹಾಕಬಾರದು. ಮೂಲಾ ನಕ್ಷತ್ರದಲ್ಲಿ ಮಕ್ಕಳು ಹುಟ್ಟಬಾರದು, ಎಂಟನೇ ಗರ್ಭದಲ್ಲಿ ಗಂಡು ಮಗು ಹುಟ್ಟಬಾರದು, ಬಸುರೆಯ ಮುಖ ಕಪ್ಪಾದರೆ ಗಂಡು, ಬೆಳ್ಳಗಾದರೆ ಹೆಣ್ಣು ಕೂಸು ಹುಟ್ಟುವುದು' ಮಕ್ಕಳ ಸಾಕೆನಿಸಿದಾಗ ಕೊನೆಗೆ ಹುಟ್ಟುವ ಕೂಸಿಗೆ 'ಸಾಕಮ್ಮ' ಎಂದು ಹೆಸರಿಡಬೇಕು ಇವೆಲ್ಲ ಬಸುರೆ-ಬಾಣಂತಿ ಕುರಿತಾದ ಜನಪದರ ನಂಬಿಕೆಗಳಾಗಿವೆ. ಹುಟ್ಟಿನ ಬಗೆಗಿನ ಕುತೂಹಲ, ಸಾವಿನ ಬಗೆಗಿನ ಭಯ, ತನ್ನ ಬದುಕನ್ನು ರೂಪಿಸುವ ಋತುಮಾನಗಳ ಚಲನೆಗಳು ಅನೇಕ ಜೀವನಾವರ್ತನ ಹಾಗೂ ವಾರ್ಷಿಕಾವರ್ತನಗಳ ನಂಬಿಕೆಗಳನ್ನು ರೂಪಿಸಿವೆ. ಉದಾ-ತೆಂಗಿನಕಾಯಿ ಕದ್ದು ತಿಂದರೆ ಮದುವೆಯಲ್ಲಿ ಮಳೆ ಬರುತ್ತದೆ, ಆರತಿ ದೀಪ ಆರಿದರೆ ಅಪಶಕುನ, ಉತ್ತರಾಯಣದಲ್ಲಿ ಸತ್ತರೆ ಸ್ವರ್ಗ, ಆಷಾಢದಲ್ಲಿ ಅತ್ತೆ-ಸೊಸೆ ಒಂದೇ ಬಾಗಿಲಲ್ಲಿ ಓಡಾಡಬಾರದು, ಭರಣಿ-ಕೃತಿಕಾ ನಕ್ಷತ್ರಗಳಲ್ಲಿ ಯಾವ ಕೆಲಸ ಆರಂಭಿಸಿದರೂ ಪೂರ್ಣಗೊಳ್ಳುವುದಿಲ್ಲ.

**ವೈಯಕ್ತಿಕ ನಂಬಿಕೆಗಳು:**

ವೈಯಕ್ತಿಕ ನಂಬಿಕೆಗಳು ಮೊದಲಿಗೆ ವ್ಯಕ್ತಿಯೊಬ್ಬನ ಸ್ವತ್ತಾಗಿದ್ದು ಮುಂದೆ ಸಾಮಾಜೀಕರಣದ ಫಲವಾಗಿ ಅದು ಸಾಂಸ್ಕೃತಿಕ ರೂಪವನ್ನು ತಾಳುತ್ತವೆ. ಬದುಕಿನ ಘಟನೆಯೊಂದಿಗೆ ಕಾಕತಾಳೀಯ ಸಂಬಂದವನ್ನು ಕಂಡುಕೊಂಡ ಒಂದು ಸಂಖ್ಯೆ, ದಿನ, ಉಂಗುರ, ಬಣ್ಣಗಳು ಅವನ ವೈಯಕ್ತಿಕ ನಂಬಿಕೆಯಾಗಿ ಮಾರ್ಪಡುತ್ತವೆ. ಒಬ್ಬನಿಗೆ ಶುಭ ಅಥವಾ ಅದೃಷ್ಟದ ಸೂಚನೆಯಾದ ಇವು ಇನ್ನೊಬ್ಬನಿಗೆ ಅಶುಭ ಅನ್ನಿಸಬಹುದು. ಉದಾ-ಶನಿವಾರ ಹೊಸ ಬಟ್ಟೆ ಉಡಬಾರದು. ೧೧೮, ೧೦೦೮, ೭೮೬, ೭, ೩, ೫, ೯೮ ಸಂಖ್ಯೆ ಶುಭ, ಮಂಗಳವಾರ ಮದುಮಗಳು/ಮನೆಮಗಳು ತವರು ಮನೆಯಿಂದ ಹೋಗಬಾರದು. ಶುಕ್ರವಾರ ಸೊಸೆ ಹೋಗಬಾರದು ಮುಂತಾದವು.

ಸಂಪ್ರದಾಯದ ಬೀಜರೂಪದಲ್ಲಿ ಒಂದು ನಂಬಿಕೆ ಇದ್ದೇ ಇರುತ್ತದೆ. ಅಂದರೆ ಸಂಪ್ರದಾಯಗಳೆಲ್ಲವೂ ನಂಬಿಕೆಗಳಾಗಿರುತ್ತವೆ. ಆದರೆ ಎಲ್ಲ ನಂಬಿಕೆಗಳು ಸಂಪ್ರದಾಯಗಳಲ್ಲ. ನಂಬಿಕೆಯೊಂದು ಐತಿಹ್ಯ, ಪುರಾಣ, ಧರ್ಮಗಳೊಂದಿಗೆ ಸಂಬಂಧವನ್ನು ಪಡೆದುಕೊಂಡು ಸಮುದಾಯದ ಶ್ರದ್ಧೆಯೊಂದಿಗೆ ರೂಢಿಗಿಳಿದಾಗ ಸಂಪ್ರದಾಯವಾಗುತ್ತದೆ. ಇಂತಹ ಸಂಪ್ರದಾಯದ ಪ್ರಾಯೋಗಿಕ ಅಥವಾ ಕ್ರಿಯಾರೂಪಗಳೇ ಆಚರಣೆಗಳು. ನಂಬಿಕೆ ಧರ್ಮದ ಅವಲಂಬನೆಯ ರೂಪ, ಆಚರಣೆ ಅದರ ಕ್ರಿಯಾರೂಪ ಎಂದು ಡಾ.ವಿವೇಕ ರೈಯವರು ಅಭಿಪ್ರಾಯಪಡುತ್ತಾರೆ. ಹೀಗಾಗಿ ನಂಬಿಕೆಗಿಂತ ಸಂಪ್ರದಾಯ, ಆಚರಣೆಗಳಿಗೆ ಹೆಚ್ಚಿನ ವ್ಯಾಪ್ತಿ ಇದೆ. ವೈಯಕ್ತಿಕ ಅಥವಾ ಕೌಟುಂಬಿಕಕ್ಕೆ ಸೀಮಿತವಾಗಿರುವ ಒಂದು ಆಚರಣೆ ವಾಡಿಕೆ ಅಥವಾ ರೀತಿ ರಿವಾಜು ಎನಿಸುತ್ತದೆ. ಇಂತಹ ವಾಡಿಕೆ ಅಥವಾ ರಿವಾಜುಗಳು ಒಂದು ಸಮಾಜ ಅಥವಾ ಪ್ರದೇಶದೊಳಗೆ ಸ್ವೀಕಾರಗೊಂಡು ಸಾಮೂಹಿಕತೆಯನ್ನು ಪಡೆದುಕೊಂಡಾಗ ಅದು ಸಂಪ್ರದಾಯವಾಗುತ್ತದೆ. ಸಂಪ್ರದಾಯಗಳು ಒಂದು ಸಮಾಜದ ಸಾಮೂಹಿಕತೆಯಲ್ಲಿ ವಿಕಾಸಗೊಳ್ಳುವುದರಿಂದ ಅಲಿಖಿತ ಕಾನೂನುಗಳಾಗಿ, ನೀತಿ ಶಾಸ್ತ್ರಗಳಾಗಿ ಕಾರ್ಯ ನಿರ್ದೇಶಿಸುತ್ತವೆ ಒಂದು ಸಮಾಜದ ಸಾಂಸ್ಕೃತಿಕ

ಮೌಲ್ಯಗಳೇ ಈ ಸಂಪ್ರದಾಯ ಎನ್ನಬಹುದು.

ಗಾಳಿ ದುರುಗವ್ವ, ಗಾಳಿಮರೆವ್ವ, ಮೊದಲಾದ ಹೆಸರುಗಳಲ್ಲಿ ಆಯಾ ದೈವಗಳು ಗಾಳಿಯ ರೂಪದಲ್ಲಿ ಇರುವಂತಹ ಕಲ್ಪನೆಯಿದೆ. ರಣ, ಕಾಲೆ ಪಿಶಾಚಿ ಮೊದಲಾದ ಕ್ಷುದ್ರ ಶಕ್ತಿಗಳು ಗಾಳಿಯ ರೂಪದಲ್ಲಿದ್ದುಕೊಂಡು ಸಮಯನೋಡಿ ಮಾನವನನ್ನು ಹಿಂಸಿಸುತ್ತವೆ ಎಂದು ಜನಪದರು ಭಾವಿಸುತ್ತಾರೆ. ಇಂಥ ಕಡೆ 'ಗಾಳಿ'ಯ ನಿವಾರಣೆಗೆ ಮಂತ್ರ ಮಾಟಗಳ ಸಹಾಯಬೇಕಾಗುತ್ತದೆ. 'ಗಾಳಿಚೇಷ್ಟೆ'ಯ ನಿವಾರಣೆಯೇ ಬಗೆಬಗೆಯ ಸಂಪ್ರದಾಯಗಳನ್ನು ಹುಟ್ಟುಹಾಕಿದೆ. ಸತ್ತವರು ಬದುಕಿದ್ದವರ ಮೈಯಲ್ಲಿ ಗಾಳಿ ರೂಪದಲ್ಲಿ ಹೊಕ್ಕು ಪೀಡಿಸಿದ್ದರ ಬಗ್ಗೆ ಬಗೆ ಬಗೆಯ ಕತೆಗಳಿವೆ. ಇಂಥ ಪೀಡೆಗಳ ನಿವಾರಣೆಗಾಗಿ ಬಗೆಬಗೆಯ ಮಾಟ ಮಂತ್ರಗಳನ್ನು ಕಂಡುಹಿಡಿಯಲಾಗಿದೆ. ಹೀಗೆ ನೋಡಿದಾಗ 'ಗಾಳಿ' ರಕ್ಷಕ ದೈವವಾಗಿ ಜನಪ್ರಿಯವಾಗುವುದಕ್ಕಿಂತ ಹೆಚ್ಚಾಗಿ ಶಿಕ್ಷಿಸುವ ದೈವವಾಗಿ ಹೆಚ್ಚು ಜನಪ್ರಿಯವಾಗಿದೆ. ಕೃಷಿಕ ಸಮಾಜವು ಗಾಳಿಯ ಚಲನೆಗೆ ಕೃಷಿಕೇಂದ್ರಿತ ಅರ್ಥಗಳು ಹುಟ್ಟಿಕೊಂಡಿವೆ. ಕಣದ ಹಬ್ಬದಲ್ಲಿ ಮೊದಲು ಗಾಳಿ ದೇವನಿಗೆ ಎಡಿ ಹಿಡಿಯುವರು, ತೆಂಕಣಗಾಳಿ ಮಳೆ ತರುತ್ತದೆ. ಮೂಡಗಾಳಿಬೀಸಿದರೆ ಫಸಲು ಚೆನ್ನಾಗಿ ಬರುತ್ತದೆ. ಪಡುಗಾಳಿ ಬೀಸಿದರೆ ಹಣ್ಣುಗಳು ಯಥೇಚ್ಛವಾಗಿ ಬೆಳೆಯುತ್ತವೆ. ಆಷಾಢದಲ್ಲಿ ಗಾಳಿ ಬೀಸಿದರೆ ಹೇಸಿಗೆ ಆಗುತ್ತದೆ, ಹಸಿವು ಹೆಚ್ಚುತ್ತದೆ. ಎಂಬಂಥ ಗಾದೆ–ನಂಬಿಕೆಗಳು ಮೂಲತಃ ಕೃಷಿಗೆ ಸಂಬಂಧಿಸಿದವುಗಳಾಗಿವೆ. ಇವೆಲ್ಲದೆ ಹರಿಶ್ಚಂದ್ರ ಗಾಳಿ, ಕುಂಬಾರ ಗಾಳಿ, ಹನುಮ ಗಾಳಿ, ಸುಂಟರ ಗಾಳಿ, ದೆವ್ವ ಗಾಳಿ, ಬಿರುಗಾಳಿ ಮೊದಲಾದ ಭಿನ್ನ ರೀತಿಯ ಗಾಳಿಸ್ವರೂಪವನ್ನು ಜನಪದರು ನಂಬಿದ್ದಾರೆ.

**ಭೂಮಿಗೆ ಸಂಬಂಧಿಸಿದ ನಂಬಿಕೆಗಳು :**

**೧) ದೈವತ್ವಕ್ಕೆ ಸಂಬಂಧೀಸಿದ ನಂಬಿಕೆಗಳು :**

ಭೂಮಿಯನ್ನು ಭೂಮಿತಾಯಿ ಎಂದೂ ತಾಳ್ಮೆ, ಸಹನೆ, ಆಶ್ರಯ ಮುಂತಾದ ಗುಣಗಳಿಗೆ ಹೆಸರಾದ ಹಡೆದ ತಾಯಿಗಿಂತಲೂ ಭೂತಾಯಿ ಹೆಚ್ಚಿನವಳೆಂಬ ನಂಬಿಕೆ. ಭೂಮಿ ಆಶ್ರಯದಾತಗಳಾದ ದೇವತೆ, ಅನ್ನ ಆಶ್ರಯಕ್ಕೆ ದಾರಿಯಾದ್ದರಿಂದ ಮಾನವರು ಸೂಕ್ತ ನೈತಿಕ ಜೀವನ ನಡೆಸಬೇಕು. ಏಕೆಂದರೆ ಭೂಮಿಯು ಪಾಪಪುಣ್ಯಗಳ ಸಮತೂಕದ ಆಧಾರದ ಮೇಲೆ ನಿಂತ ತಾಣ. ಭೂಮಿ ಸಕಲ ವಸ್ತುಗಳನ್ನು ತನ್ನಲ್ಲಿ ನುಂಗಿಕೊಂಡು ಜಗತ್ತನ್ನು ಸ್ವಚ್ಛಗೊಳಿಸುವ ತಾಯಿಯೂ ಹೌದು. ಈ ಭೂಮಿಯ ಮೇಲೆ ಎಷ್ಟು ಕೊಳೆ ಇದ್ದರೂ ಇದನ್ನು ಆಕೆ ತನ್ನಲ್ಲಿರಿಸಿಕೊಳ್ಳುತ್ತಾಳೆ. ಭೂಮಿಗೆ ಆದಿ ಅಂತ್ಯಗಳಿಲ್ಲ. ಹೊಲಸೆಂಬುದಿಲ್ಲ. ಆದರೂ ಆಕೆಯನ್ನು ಶುದ್ದಿಯಾಗಿಡುವುದು ಎಲ್ಲರ ಕರ್ತವ್ಯ. ಈ ಮೂಲಕ ಸ್ವಚತಾ ಅಭಿಯಾನದ ಜಾಗೃತಿ ಮಾಡುತ್ತಾ ಭುಮಿಯನ್ನು ಸ್ವಚ್ಚವಾಗಿ ಇಡೋಣ. ಆದ್ದರಿಂದ ಆಕೆಯಲ್ಲಿರುವ ಪೂಜ್ಯಭಾವನೆಯಿಂದ ಮಣ್ಣನ್ನು ಅನೇಕ ರೂಪದಲ್ಲಿ ಮತ್ತು ರೀತಿಯಲ್ಲಿ ಪೂಜಿಸಲಾಗುವುದು. ಭೂಮಿಯನ್ನು ದೇವರೆಂದು ಪೂಜಿಸಿದರೂ, ಅವಳನ್ನು ಸಂಪೂರ್ಣ ರೂಪದಿಂದ ಪೂಜಿಸಬೇಕೆ ಹೊರತು ಸಂಕೀರ್ಣ ರೂಪದಿಂದಲ್ಲ ಎಂಬುದು ನಂಬಿಕೆ. ಆದ್ದರಿಂದಲೇ ಅವಳಿಗೆ ಗುಡಿಗೋಪುರಗಲೂ ನಿಷಿದ್ಧ, ಹಳ್ಳಿಗಳಲ್ಲಿ ಒಂದು ಪವಿತ್ರ ವೃಕ್ಷದ ಕೆಳಗಡೆ ಕಲ್ಲು ಮಣ್ಣು ಮಡಕೆ ಗಾಜಿನ ಚೂರುಗಳಲ್ಲಿ ಒಂದು ಗುಡ್ಡವನ್ನು ಮಾಡಿ, ಅಲ್ಲಿಗೆ ಜನರು ಸಾಮೂಹಿಕವಾಗಿ ಒಂದು ಹರಕೆ ಕಾಣಿಕೆಗಳ ಸಮೇತ ಪೂಜೆ ಮಾಡುತ್ತಾರೆ. ಗಂಗೆಯ ನೀರಲ್ಲಿ ಬಿದ್ದವನನ್ನು ನೂರುಬಾರಿ ತೇಲಿಸುವಳೆಂದೂ, ಭೂಮಿಯು ಸಹನೆಯ ಮೂರ್ತಿ ಎಂದೂ ತಿಳಿದಿದ್ದೇವೆ. ಭೂಮಿ ಬಾಯಿ ಬಿಡುವುದೂ, ಜಲಪ್ರಳಯವಾಗುವುದೂ ಮನುಷ್ಯ ಕೋಟಿಯ ಅವನತಿಗಾಗಿಯೇ, ಇಂಥ ದುಷ್ಟ ಶಿಷ್ಟ ಶಕ್ತಿಗಳೆರಡನ್ನೂ ಒಳಗೊಂಡಿರುವ ಕಾರಣ ಅವನ್ನು ಭಯ ಭಕ್ತಿಯಿಂದ ಆರಾಧಿಸುವದು ನಡೆದು ಬಂದಿದೆ. ಸ್ತ್ರೀಯರಿಗೆ ಅತ್ಯಂತ ಕಷ್ಟಕರವಾದ ಪ್ರಸಂಗಗಳು ಬಂದಾಗ, ಕೆಲವು ಮಂತ್ರಗಳನ್ನುಚ್ಚರಿಸುತ್ತಾ ಭೂಮಿಗೆ ನಮಸ್ಕರಿಸಿದರೆ ಪರಿಹಾರವಾಗುದೆಂಬ ಭಾವನೆ ಇತ್ತು. ಸ್ತ್ರೀ ಅವಮಾನವಾಗುವ ಸಂದರ್ಭದಲ್ಲಿ ಭೂಮಿಯ ಬಾಯಿಬಿಟ್ಟು ಅವಳನ್ನು ಸೇರಿಸಿಕೊಳ್ಳುವುದೆಂಬ ನಂಬಿಕೆ. ಸೀತೆಯನ್ನು ಅವಳ ತಾಯಿಯಾದ ಭೂದೇವಿಯು ತನ್ನ ಮಡಿಲಿಗೆ ಸೇರಿಸಿಕೊಂಡಳು ಎಂಬ ನಂಬಿಕೆ.

**೨) ನಿಸರ್ಗಕ್ಕೆ ಸಂಬಂಧಿಸಿದ ನಂಬಿಕೆಗಳು:**

ಸಕಲ ಪ್ರಾಣಿಗಳ, ಗಿಡ–ಮರಗಳ, ಜಲನಿಧಿಗಳ ತಾಣ ಈ ಭೂಮಿ, ಇದು ವಿಶಾಲವಾಗಿ, ಚಪ್ಪಟೆಯಾಗಿದೆ ಎಂಬುದು ನಂಬುಗೆ. ಪಾಪ ಹೆಚ್ಚಾದಾಗ ಈ ಭಾರವನ್ನು ತಾಳಲಾರದೆ ಭೂತಾಯಿ ಭೂಕಂಪನ ಮುಂತಾದವುಗಳನ್ನು ಇಂತಹ ವ್ಯಕ್ತಿಗಳನ್ನು ತನ್ನಲ್ಲಿ ನುಂಗಿ ತನ್ನ ಭಾರವನ್ನು ಕಡಿಮೆ ಮಾಡಿಕೊಳ್ಳುತ್ತಾಳೆ. ಆದ್ದರಿಂದ ಜಹಾನಪದರು ಯಾರನ್ನಾದರೂ ಬೈಯ್ಯುವಾಗ ಭೂಮಿಗೆ ಭಾರವಾಗಡವೆಂದು ಬಯ್ಯುತ್ತಾರೆ. ಜನಪದರ ದೃಷ್ಟಿಯಲ್ಲಿ ಭೂಮಿಯು ಸೂರ್ಯ–ಚಂದ್ರರಿಗಿಂತಲೂ ದೊಡದಡದು. ಸೂರ್ಯ–ಚಂದ್ರರು ಭೂಮಿಯ ಸತ್ತ ತಿರುಗುತ್ತಾರೆ. ಭೂಮಿ–ಸೂರ್ಯ ಮುಳುಗುವುದನ್ನು ಒಡಪಿನ ರೀತಿಯಲ್ಲಿ, ತಾಯಿಯ ಹೊಟ್ಟೆಯಲ್ಲಿ ಮಗ ಹೋಗುತ್ತಾನೆ ಎಂದೂ ಹೇಳುತ್ತಾರೆ. ಸೂರ್ಯ–ಚಂದ್ರರು ದೇವರ ಮಕ್ಕಳು, ಇವರ ತಾಯಿ ಭೂದೇವಿ. ಭೂದೇವಿ, ಗಂಗಾಮಾತೆಯರು ಈ ಪ್ರಪಂಚದ ಸ್ಥಿತಿ–ಲಯಗಳೆರಡಕ್ಕೂ ಕಾರಣ ಕರ್ತರಾಗಿದ್ದಾರೆ. ಅತ್ಯಂತ ಕ್ಷಮಾಶೀಲರೂ ಸಹಾನುಭೂತಿಯುಳ್ಳವರೂ ಅಗಿದ್ದು ನಮ್ಮ ಅನೇಕ ತಪ್ಪುಗಳನ್ನು ಮನ್ನಿಸಿ ನಮ್ಮನ್ನು ಕಾಪಾಡುವರೆಂದು ಅವರನ್ನು ಆರಾಧಿಸುತ್ತ ಬಂದಿದ್ದೇವೆ.

**೩) ವ್ಯವಸಾಯಕ್ಕೆ ಸಂಬಂಧಿಸಿದ ನಂಬಿಕೆಗಳು:**

ರಾಶಿ ತೂರುವಾಗ ತಲೆಗೆ ವಸ್ತ್ರಾ ಕಟಗೋ ಬೇಕು, ಭೂಮಿಯನ್ನು ನೋಯಿಸಬಾರದೆಂದು ಉಳುವಾಗ ರೈತರು ದೊಡ್ಡ ನೇಗಿಲನ್ನು ಉಪಯೋಗಿಸುವುದಿಲ್ಲ, ಚಪ್ಪಲಿ ಧರಿಸಿ ಹೊಲದಲ್ಲಿ ನಡೆದಾಡುವುದಿಲ್ಲ. ಅಲ್ಲದೆ ರಸಗೊಬ್ಬರ ಹಾಕಿದರೆ ಭೂಮಿ ಮೈಲಗಿ ಆಗುತ್ತದೆ, ಕೋಪಗೊಂಡು ಬೆಳೆ ನೀಡುವುದಿಲ್ಲವೆಂದು ಈ ಹಿಂದೆ ನಂಬಿದ್ದರು. ಸುಗ್ಗಿಯ ದೇವತೆಯಾಗಿ ಗೌರಿಯನ್ನು ಪೂಜಿಸುವರು. ಸ್ತ್ರೀಯ ತಲೆಯ ಮೇಲೆ ಹೂವಿನ ಗೊಂಚಲನ್ನು ಸ್ತ್ರೀರೂಪದಲ್ಲಿ ಮಾಡಿ, ವಸ್ತ್ರ ಒಡವೆಗಳಿಂದ ಮೆರವಣಿಗೆಯಲ್ಲಿ ಕೊಂಡೊಯ್ಯುತ್ತಾರೆ. ಈ ರೀತಿಯ ಆರಾಧನೆಗಳಿಂದ ಹರ್ಷಿಸುವ ಭೂದೇವಿ ಸಂಪ್ರೃಪ್ತಳಾಗಿ ಮತ್ತಷ್ಟು ವರ್ಧಿಸುತ್ತಾಳೆ ಎಂದೇ ನಂಬಿಕೆ. ಸುಗ್ಗಿಯ ಕಾಲದಲ್ಲಿ, ಕಣದಲ್ಲಿ ಸ್ವಲ್ಪ ಧಾನ್ಯವನ್ನು ನೈವೇದ್ಯಮಾಡಿ ಪೂಜೆ ಮಾಡಿದರೆ, ಮುಂದಿನ ವರ್ಷ ಸಮೃದ್ಧಿಯಾದ ಬೆಳೆ, ಕಟ್ಟಡಗಳನ್ನು ಕಟ್ಟಲು ತಳಪಾಯ ಹಾಕುವಾಗ, ಮೊದಲನೆ ಕಲ್ಲನ್ನು ಹಾಕುವುದಕ್ಕೆ ಮುಂಚೆ ಕೆಳಗೆ ತೆಂಗಿನಕಾಯಿ, ಬೆಳ್ಳಿಯ ನಾಣ್ಯ, ಹವಳ ಮುತ್ತುಗಳನ್ನು ಒಂದು ಅರಿಸಿನ ಬಟ್ಟೆಯಲ್ಲಿ ಕಟ್ಟಿ, ಭೂಮಿಗೆ ಕಾಣಿಕೆ ಒಪ್ಪಿಬೇಕೆಂದು ನಂಬಿಕೆ ಇದೆ. ಭೂದೇವಿಯ ಪ್ರತಿಮಾಸದಲ್ಲಿ ಏಳುದಿನವೂ ಪ್ರತಿವಾರದಲ್ಲಿ ಸೋಮವಾರವೂ ನಿದ್ರಿಸುತ್ತಾಳೆಂದು ಬಗೆದು ಆಗ ಉಳುವುದು ಮುಂತಾದ ಹಲದ ಕೆಲಸ ಆರಂಭವನ್ನು ಮಾಡದೆ ಎಲ್ಲ ಕೆಲಸ ನಿಲ್ಲಿಸುವರು.

**೪) ಬಲಿಗೆ ಸಂಬಂಧಿಸಿದ ನಂಬಿಕೆಗಳು:**

ನರಬಲಿ ಹರೆ ಕಾಣಿಕೆಗಳನ್ನು ನದಿಗೆ, ಭೂಮಿಗೆ ಅರ್ಪಿಸುವುದು ಎಲ್ಲಾ ದೇಶದಲ್ಲೂ ಎಲ್ಲಾ ಕಾಲದಲ್ಲೂ ನಡೆದು ಬಂದಿದೆ. ಕುರಿ, ಕೋಳಿಯನ್ನು ಕರೆಮ್ಮ, ಮರೆಮ್ಮ, ಮಾರೆಮ್ಮ, ದುರ್ಗಮ್ಮ

ಮುಂತಾದ ದೇವರುಗಳಿಗೆ ಹರಕೆ ರೂಪದಲ್ಲಿ ಬಲಿಕೊಟ್ಟರೆ ಒಳ್ಳೆಯದಾಗುತ್ತದೆಂಬ ನಂಬಿಕೆಗಳು ಹುಟ್ಟಿಕೊಂಡಿವೆ.

**೫) ರೋಗ–ರುಜಿನಗಳಿಗೆ ಸಂಬಂಧಿಸಿದ ನಂಬಿಕೆಗಳು:**
ಆಸೆಗಳನ್ನು ಇಟ್ಟಕೊಂಡು ಸತ್ತವರು, ತೊನ್ನು ಮುಂತದ ಪಾಪದಿಂದ ಬಂದ ರೋಗದಿಂದ ಸತ್ತವರನ್ನು, ಸತ್ತ ಬಾಣತಿ ಮತ್ತು ಬಸುರಿಯನ್ನು ಕೆಳವರ್ಗಕ್ಕೆ ಸೇರಿದ ಪ್ರಾಣಿಗಳಾದ ನಾಯಿ, ಕತ್ತೆ, ಕಾಗೆ ಮುಂತಾದವನ್ನು ನೆಲದಲ್ಲಿ ಹುಗಿಯುವುದಿಲ್ಲ. ಹೀಗೆ ಮಾಡಿದರೆ ಭೂತಾಯಿ ಮೈಲಿಗೆಯಾಗುತ್ತಾಳೆಂಬ ನಂಬಿಕೆ ಇದೆ. ಆದ್ದರಿಂದ ಇದನ್ನು ಸುಡುವುದು ವಾಡಿಕೆ. ಹೀಗೆ ಮಾಡದೆ ಹೂಳಿದರೆ ಭೂಮಿ ತಾಯಿ ಮಲಿನಗೊಂಡು ತನ್ನ ಪ್ರಿಯಕರನಾದ ವರುಣನನ್ನು ಕೂಡ ಬಯಸದೆ ದೂರ ಉಳಿಯುವಳು. ಈ ಕಾರಣದಿಂದ ಮಳೆ ಬರದೆ ಬರಗಾಲ ಬರುತ್ತದೆ ಎಂಬ ನಂಬಿಕೆ ಇದೆ.

**೬) ಇತರೆ ನಂಬಿಕೆಗಳು:**
ಆಕಳಾಗಲಿ, ಎಮ್ಮೆಯಾಗಲಿ, ಹಾಲುಕೊಡಲು ಪ್ರಾರಂಬಿಸಿದಾಗ ಭೂಮಿಗೆ ಐದು ಅಥವಾ ಏಳು ಹನಿ ಹಾಲನ್ನು ಕರೆದು ಮೊದಲು ಭಕ್ತಿಯಿಂದ ಅರ್ಪಿಸಿದ ನಂತರವೇ ಮನುಷ್ಯರು ಉಪಯೋಗಿಸುವರು. ನಿಂತು ಉಚ್ಚೆ ಹೊಯ್ದರೆ ಭೂತಾಯಿಬಾಯಲ್ಲಿ ಹೊಯ್ದಂತೆ, ಆದ್ದರಿಂದ ಕುಳಿತು ಉಚ್ಚೆ ಹೊಯ್ಯಬೇಕು ಎಂಬ ನಂಬಿಕೆ. ಪ್ರಪಂಚದಾದ್ಯಂತ ಭೂಮಿಯನ್ನು ಸ್ತ್ರೀಯೆಂದು ಬಾವಿಸಿ ಮಾತೃದೇವತೆಯೆಂದೇ ಪೂಜಿಸುತ್ತಾರೆ. ಆದ್ದರಿಂದಲೇ ಪ್ರತಿಯೊಬ್ಬನು ತನ್ನ ದೇಶವನ್ನು ತಾಯ್ನಾಡು ಎಂದು ಸಂಬೋಧಿಸುವುದು. ಭೂಮಿಯ ಅನೇಕ ಸಸ್ಯಗಳನ್ನು ದೇವತೆಗಳೆಂದು ಪೂಜಿಸುವುದು ಸರ್ವೇಸಾಮಾನ್ಯವಾದ ಸಂಗತಿ. ಭೂದೇವಿಯ ಕೃಪೆಯಾಗದೆ ಬೆಳೆಯಾಗದೆಂದು ನಂಬಿ, ಫಲಬಂದ ತಕ್ಷಣವೇ ಅವಳಿಗರ್ಪಿಸುವುದು ಅವಳ ಆರಾಧನೆಯ ಒಂದು ಭಾಗವೇ ಆಗಿದೆ. ಜನಪದರು ತಮ್ಮ ಆಗುಹೋಗುಗಳಿಗೆ ಭೂಮಿತಾಯಿಯೇ ಕಾರಣ ಎಂದು ನಂಬುತ್ತಾರೆ. ತಮ್ಮ ಎಲ್ಲ ಶ್ರೇಯಸ್ಸಿಗೆ ಅವಳೇ ಕಾರಣ ಎಂದು ತಿಳಿಯುತ್ತಾರೆ. ಅವರ ಬದುಕಿನ ಕೇಂದ್ರಶಕ್ತಿ ಭೂಮಿತಾಯಿ. ಆದ್ದರಿಂದ ಅವಳನ್ನು ಪೂಜ್ಯಭಾವನೆಯಿಂದ ಕಾಣುವುದುನ್ನು ಮೇಲಿನ ನಂಬಿಕೆಗಳು ಇನ್ನಷ್ಟು ದೃಢಪಡಿಸುತ್ತದೆ. ನಿಸರ್ಗಕ್ಕೆ ಸಂಬಂಧಿಸಿದ ಕೆಲವು ನಂಬಿಕೆಗಳಲ್ಲಿ ಕೆಲವು ವೈಜ್ಞಾನಿಕವಾಗಿ ಸಮರ್ಥನೀಯ ನಿಯಮವಾದವು. ಭೂಮಿಗೆ ರಸಗೊಬ್ಬರ ಹಾಕಿದರೆ ಆಕೆ ಮಲಿನವಾಗಿ ಕೋಪಗೊಂಡು ಬೆಳೆ ಕೊಡುವುದಿಲ್ಲ ಎಂಬುದು ಅಂಥ ಒಂದು ನಂಬಿಕೆ.ಭೂಮಿಯಲ್ಲಿ ಹೆಚ್ಚಿನ ರಸಗೊಬ್ಬರ ಹಾಕುವುದರಿಂದ ಭೂಮಿಯ ಕ್ರಮೇಣ ತನ್ನ ಸತ್ವವನ್ನು ಕಳೆದುಕೊಂಡು ಶಕ್ತಿ ಕುಂದುತ್ತದೆ. ಭೂಮಿ ಬಂಜರಾಗುವ ಸಾಧ್ಯತೆ ಇದೆ ಎಂಬ ಆಶಯ ಅರ್ಥಪೂರ್ಣವಾದುದು.

**ನೀರಿಗೆ ಸಂಬಂಧಿಸಿದ ನಂಬಿಕೆಗಳು:**
ಜನಪದರಲ್ಲಿ ನೀರಿನ ಬಗ್ಗೆ ಅನೇಕ ನಂಬಿಕೆಗಳು ಹುಟ್ಟಿಕೊಂಡಿವೆ. ನೀರನ್ನು ಈ ರೀತಿಯಾಗಿ ನಂಬಿ ಕರೆಯುವರು. ಗಂಗೆ, ಮಳೆ, ನದಿ, ತೀರ್ಥ, ನೀರು, ಧೂಳಪಾದೂದಕ, ಉದಕ ಮುಂತಾಗಿವೆ. ಇದರ ಬಗೆಗಿನ ನಂಬಿಕೆಗಳೆಂದರೆ; ಬೆಂಕಿ ನೀರುನಲ್ಲಿ ಕಾಣಿಸಿಕೊಳ್ಳಬಾರದು, ಬೆಂಕಿ ಮತ್ತು ನೀರು ಒಬ್ಬನೇ ತೆಗೆದುಕೊಂಡು ಹೋಗಬಾರದು, ಮಳೆ ಬಿಸಿಲು ಒಟ್ಟಿಗೆ ಬಂದರೆ ನರಿಗೂ ಕಾಗೆಗೂ ಮದುವೆ, ಶುಭ ಕಾರ್ಯಕ್ಕೆ ಅಥವಾ ಪ್ರಯಾಣಕ್ಕೆ ಹೊರಡುವಾಗ ಕಾಲಿ ಕೊಡ ಅಥವಾ ಬೆಂಕಿ ಕಾಣಿಸಿಕೊಳ್ಳಬಾರದು, ಅಕ್ಕಪಕ್ಕದ ಮನೆಗೆ ರಾತ್ರಿ ನೀರು–ಬೆಂಕಿ ಕೂಡಿಸಿ ಕೊಡಬಾರದು. ಜನಪದರಲ್ಲಿ ನೀರು ಮತ್ತು ಬೆಂಕಿ ಎರಡೂ ವಿರುದ್ಧ ಸಂಕೇತಗಳು. ನೀರು ಸೃಷ್ಟಿಯ ಸುಖದ ಒಳ್ಳೆಯ ಶಕುನವಾದರೆ, ಬೆಂಕಿ ವಿನಾಶದ, ಕೆಡುಕಿನ ಸಂಖೇತ. ಇವು ಪರಸ್ಪರ ದೂರವಿದ್ದರೆ ಕ್ಷೇಮ. ಬಾವಿ ಹತ್ತಿರ ಹೋಗಬಾರದು. ಮನುಷ್ಯನ ಸೆಳೆದುಕೊಳ್ಳುತ್ತೆ, ಕೆರೆ ಕಟ್ಟಡಕ್ಕೆ ಹೆಂಗಸಿನ ಬಲಿಕೊಡಬೇಕು, ತುಂಬಿದ ಕೆರೆ ಕೂಗುತ್ತೆ, "ಮೂರುಸಾವಿರ ವಡ್ಡರ ಕರ್ರಿ/ನಾಲ್ಕೂ ಸಾವಿರ ಕುಡುಗೋಲ ತರ್ರಿ/ಕಲ್ಲು ಕಲ್ಲಿಗೂ ಕುರಿಯ ಕಡಿಸಯ್ಯೊ...!/ನಾ ನಿಲ್ಲುವಳಲ್ಲ.. ನಾ ನಿಲ್ಲುವಳಲ್ಲ." 'ನೀರು ನಿಂತಿದೆ' 'ನೀರು ಹಾಕಿಕೊಂಡಾಳ' ಎಂಬ ನಂಬಿಕೆ ಇದೆ. ಜನಪದರ ಜೀವನವು ಮಳೆಯಲಿ ಜೊತೆಯಲಿ ಬೆಳೆದಿದೆ. ಮಳೆಯ ಬಗ್ಗೆ ಇರುವ ನಂಬಿಕೆಗಳನ್ನು ತಿಳಿಯಬಹುದು. ಒಂದು ಅನಾವೃಷ್ಟಿಯನ್ನು ಕೇಂದ್ರವಾಗಿ ಉಳ್ಳ ನಂಬಿಕೆ. ಎರಡು ಅತಿವೃಷ್ಟವಯನ್ನು ಕೇಂದ್ರವಾಗಿ ಉಳ್ಳ ನಂಬಿಕೆ. ಜಾನಪದರಲ್ಲಿ ಸಿಗುವ ನೀರಿಗೆ ಸಂಬಂಧಿಸಿದ ನಂಬಿಕೆಗಳು ಹೆಚ್ಚಿವೆ. ಚಂದ್ರಮಂಡಲ ಹಾಕಿದರೆ ಮಳೆ ಬರುವುದಿಲ್ಲ, ಕನಸಿನಲ್ಲಿ ಕುರಿಗಳ ಹಿಂಡು ಕಾಣಿಸಿದರೆ ಮಳೆ ಬರುತ್ತದೆ, ಕಲ್ಲಡಿ ಕಪ್ಪೆಗಳು ಕೂಗಿದರೆ ಮಳೆ ಬರುತ್ತದೆ, ದನಗಳಿ ಕತ್ತೆತ್ತಿ ಆಕಾಶವನ್ನು ಮೂಸಿದರೆ ಮಳೆ ಬರುತ್ತದೆ, ಮಳೆರಾಯನ್ನ ಮಾಡಿದರೆ ಮಳೆ ಬರುವುದೆಂಬ ನಂಬಿಕೆ. ಕುರಿ ಅಥವಾ ಮೇಕೆಯನ್ನು ಆಕಾಶಕ್ಕೆ(ಮೋಡಗಳಿಗೆ)ಇಳೀ ತೆಗೆದು ಸರಹದ್ದನ್ನು ಮಳೆ ಹಾಡುಗಳನ್ನು ಹಾಕಿಕೊಂಡು ಪ್ರದಕ್ಷಿಣೆ ಬಂದು ಊರ ಬಾಗಿಲಲ್ಲಿ ಬಲಿ ಕೊಡಬೇಕು, ಆಗ ರಕ್ತ ನೆಲಕ್ಕೆ ಬೀಳುತ್ತಿದ್ದಂತೆ ಮಳೆ ಬರುತ್ತದೆಂಬ ನಂಬಿಕೆ.

**ಜನಪದರಲ್ಲಿ ಕಂಡುಬರುವ ನದಿ ಕುರಿತು ಕೆಲ ನಂಬಿಕೆಗಳು :**
ಹರಿಯೊ ನೀರಿಗೆ ಮೈಲಿಗೆ ಇಲ್ಲ, ಪ್ರಯಾಣದಲ್ಲಿ ನದಿ ಸಿಕ್ಕರೆ ಅದಕ್ಕೆ ಎಲೆ ಅಡಿಕೆ ಎಸೆದು ಕೈ ಮುಗಿಯಬೇಕು, ಬಸುರಿಯನ್ನು ಒಮ್ಮೆಯಾದರೂ ನದಿ ದಾಟಿಸಬೇಕು, ಮುಟ್ಟಾದ ಹೆಂಗಸು ನದಿಗೆ ಇಳಿಯಬಾರದು, ನದಿ ಮೂಲ ಹುಡುಕಬಾರದು, ನದಿಯ ದಂಡೆಯಲ್ಲಿ ದೇವರಿದ್ದರೆ ಮೊದಲು ಗಂಗೆ ಪೂಜೆ ಮಾಡಿ ಅನಂತರ ಆ ದೇವರಿಗೆ ಪೂಜೆ ಸಲ್ಲಿಸಬೇಕು, ಹರಿವ ನೀರಿಗೆ ದೋಷವಿಲ್ಲ ಎನ್ನುವ ನಂಬಿಕೆ ಜನಪದರಲ್ಲಿ ಬಲವಾಗಿರುವುದು. ತೀರ್ಥಪರಿಶುದ್ಧ–ಪ್ರಾಯಶ್ಚಿತ್ತ–ಸೂತಕ, ಜನಪದರ ಅರ್ಥದಲ್ಲಿ ತೀರ್ಥ, ಯಾವುದೇ ಪೂಜೆಯ ಸಂದರ್ಭದಲ್ಲಿ ಬಳಕೆಯಾಗುವ ನೀರು, ತೆಂಗಿನ ನೀರು ಯಾರನ್ನು ಮುಟ್ಟದೆ ಬಾವಿ ಅಥವಾ ನದಿಯಿಂದ ತಂದ ನೀರು,

**ಜನಪದರು ಬಲಿ ಕೊಡುವ ಸಂದರ್ಬದ ನಂಬಿಕೆಗಳಲ್ಲಿ ನೀರಿನ ಪಾತ್ರ :**
ದೇವರಿಗೆ ಕುರಿ ಕಡೆಯುವ ಮೊದಲು ಕುರಿಯ ತಲೆಯ ಮೇಲೆ ನೀರು ಸಿಂಪಡಿಸಬೇಕು, ದೇವಸ್ಥಾನದಿಂದ ಬಂದಾಗ ಕಾಲು ತೊಳೆದು ಮನೆಯೊಳಗೆ ಬರಬಾರದು, ಮುಸ್ಸಂಜೆಯಲ್ಲಿ ನೀರಿನ ಬಳಿ ಹೋಗಬಾರದು, ಊಟ ಮಾಡುವಾಗ ಸೀನಿದರೆ ನೀರನ್ನು ನೆಲಕ್ಕೆ ಹಾಕಬೇಕು, ತೀರ್ಥ ಮತ್ತು ದೇವರ ಪ್ರಸಾದದಲ್ಲಿ ರುಚಿಯನ್ನು ನೋಡಬಾರದು, ಒಡವೆಗಳಿಗೆ ನೀಲಿ ಹರಳು ಹಾಕಿಸಬಾರದು, ನೀಲಿ ಶನಿಯ ಮೂಲ ಅದರ ನೀರು ಮೈಮೇಲೆ ಬೀಳಬಾರದು, ಮಳೆ, ಸಿಡಿಲು ಬಂದಾಗ ಮನೆಯ ಹೊರಗೆ ಅಥವಾ ಮನೆಯ ತೊಟ್ಟಿಗೆ ಕಬ್ಬಿಣ(ಕೊಡಲಿ, ಕುಳ)ವನ್ನು ಎಸೆಯಬೇಕು, ತುಂಬಿದ ಕೊಡ ಎದುರಾದರೆ ಶುಭ, ನೀರು ಕೇಳಿದವರಿಗೆ ಕೊಡದಿದ್ದರೆ ಹಲ್ಲಿ ಜನ್ಮ ಬರುತ್ತದೆ, ರಾತ್ರಿ ಹೊತ್ತು ಸುಣ್ಣದ ಗಡಿಗೆ ನೀರನ್ನು ಹಾಕಬಾರದು, ಸುಣ್ಣಾ ಕೈಯಾಗ ಕೊಟ್ಟರ ಜಗಳವಾಗುತ್ತೆ, ಸುಣ್ಣದಾಗ ನೀರ ಹಾಕಬಾರದು ಅದು ತಾಯಿ ಹೊಟ್ಟೆಯಲ್ಲಿ ಹಾಕದಂಗ, ಹಾಲು ತಂದು ಕೊಡುವವನಿಗೆ ಹಾಲು

ನೀರು ಎಂದು ಹೇಳಬಾರದು, ಮಕ್ಕಳಿಗೆ ಸ್ನಾನ ಮಾಡಿಸಿದ ನೀರನ್ನು ದಾಟಬಾರದು, ಸತ್ತವರ ಮನೆಯ ಸೂತಕ ಕಳೆಯುವವರೆಗೂ ಅವರ ಮನೆಯಲ್ಲಿ ನೀರು ಕುಡಿಬಾರದು, ಹೊರಗೆ ಊಟಮಾಡುವಾಗ ಎಲೆಯ ಸುತ್ತ ಒಂದು ಸುತ್ತು ನೀರು ಚಿಮಕಿಸಬೇಕು, ಉಂಡ ತಕ್ಷಣ ಸ್ನಾನ ಮಾಡಬಾರದು, ಕೆರೆ ಮುಂದೆ ಶನಿದೇವರ ಗುಡಿ ಇದ್ದರೆ ಕೆರೆ ತುಂಬುವುದಿಲ್ಲ, ಬಾವಿ ತೋಡುವಾಗ ಒಂದು ಹಸುವನ್ನು ಪೂಜೆ ಮಾಡಿ ಬಿಡುತ್ತಾರೆ, ಅದು ಎಲ್ಲಿ ನಿಲ್ಲುತ್ತದೋ ಅಲ್ಲಿ ನೀರಿರುತ್ತದೆ, ಹೊರಗಿನಿಂದ ಬಂದವರಿಗೆ ಬೆಲ್ಲ ನೀರು ಕೊಡಬೇಕು, ನೀರು ಇಲ್ಲದ ಮನೆಗೆ ಲಕ್ಷ್ಮಿ ಬರುವುದಿಲ್ಲ, ಊರಿನಲ್ಲಿ ಹೆಣ ಇಟ್ಟುಕೊಂಡು ನೀರು ತರಬಾರದು, ಒಲೆಯನ್ನು ನೀರು ಹಾಕಿ ಆರಿಸಬಾರದು, ಮದುವೆಯ ನಂತರ ಹೆಣ್ಣು ಗಂಡು ಬಾವಿಗೆ ಹೋಗಿ ಗಂಗಾ ಪೂಜೆ ಮಾಡಿ ಮೂರು ತರಹದ ಧಾನ್ಯವನ್ನು ಒಳಕ್ಕೆ ಹಾಕ್ಬೇಕು, ಎನೇ ದಾನ ಕೊಟ್ಟರು ಧಾರೆ ಎರೆದು ಕೊಡಬೇಕು, ಉಪವಾಸವಿದ್ದಾಗ ನೀರಿಲ್ಲದೆ ಬೇರೆನೂ ಕುಡಿಯಬಾರದು. ನೀರು ನಿಷಿದ್ದವಲ್ಲ, ಯಾರಾದರೂ ಪ್ರಯಾಣ ಹೋದ ಮೇಲೆ ಬಾಗಿಲಿಗೆ ನಿರು ಹಾಕಬಾರದು, ಸ್ನಾನಾ ಮಾಡಬಾರದು, ಸ್ನಾನ ಮಾಡುವಾಗ ಒಂದು ಚೂರು ನೀರನ್ನು ತಳದಲ್ಲಿ ಉಳಿಸಬೇಕು, ಹೆರಿಗೆ ನಂತರ ತಣ್ಣೀರು ಮುಟ್ಟುವ ಮೊದಲು ಗಂಗೆ ಪೂಜೆ ಮಾಡಿ ಮುಟ್ಟಬೇಕು, ತಂಗಿಯ ಮೊದಲ ಮಗುವನ್ನು ಅಣ್ಣ ನೀರಿನಲ್ಲಿ ಪ್ರತಿಬಿಂಬ ನೋಡಿ ಅನಂತರ ಮಗುವನ್ನು ನೋಡಬೇಕು, ಬೆನ್ನ ಹಿಂದಿನಿಂದ ನೀರು ಹಾಕಬಾರದು. ಹೀಗೆ ಹಲವಾರು ರೀತಿಯಲ್ಲಿ ನಂಬಿಕೆಗಳಿವೆ.

**ಬೆಂಕಿಗೆ ಸಂಬಂಧಿಸಿದ ನಂಬಿಕೆಗಳು :**

ಬೆಂಕಿಗೆ ಸಂಬಂಧಿಸಿದ ನಂಬಿಕೆಗಳಲ್ಲಿ ೩ ವಿಧಗಳು ೧)ಕೆಂಡ ಹಾಗೂ ಜ್ವಾಲೆಗೆ ಸಂಬಂಧಿಸಿದ ನಂಬಿಕೆಗಳು. ೨)ಜ್ಯೋತಿಗೆ ಸಂಬಂಧಿಸಿದ ನಂಬಿಕೆಗಳು ೩)ಸೂರ್ಯನ ಬೆಳಕು-ಬಿಸಿಲು, ಮಿಂಚು-ಸಿಡಿಲುಗಳಿಗೆ ಸಂಬಂಧಿಸಿದ ನಂಬಿಕೆಗಳು.

**೧) ಕೆಂಡಕ್ಕೆ ಸಂಬಂಧಿಸಿದ ನಂಬಿಕೆಗಳು :**

ಹೋಳಿಹಬ್ಬದಲ್ಲಿ ಕಾಮನನ್ನು ಸುಟ್ಟ ಕೆಂಡದಲ್ಲಿ ಗೆಡ್ಡೆ-ಗೆಣಸು, ಕಡಲೆ ಸುಟ್ಟು ತಿಂದರೆ ಹಲ್ಲು ಗಟ್ಟಿಯಾಗುತ್ತವೆ. ಈ ಕೆಂಡದ ಬೂದಿಯನ್ನು ಹೊಲಗಳಲ್ಲಿ ಚೆಲ್ಲಿದರೆ ಬೆಳೆ ಸಮೃದ್ಧಿಯಾಗಿ ಬೆಳೆಯುವದೆಂಬ ನಂಬಿಕೆ ಇದೆ. ಕಾಮಣ್ಣನ ಬೆಂಕಿ ತಂದು ಅಡಿಗೆ ಮಾಡುವುದು ಪವಿತ್ರ ಎಂಬ ನಂಬಿಕೆ ಇದೆ. ಕುಳಿತಿರುವ ಬಂಧುಗಳ ಬೆನ್ನ ಹಿಂದೆ, ಎದುರು ಬದರು ಕುಳಿತ ಬಂಧುಗಳ ನಡುವೆ ಬೆಂಕಿ ಒಯ್ಯಬಾರದು. ಅಕ್ಕಸಾಲಿಗರು ಕೆಂಡವಿರುವ ಅಗ್ಗಿಷ್ಟಿಕೆಯನ್ನು ಕಾಳವ್ವ ಎಂದು ಪೂಜಿಸುತ್ತಾರೆ. ಕೈಯಲ್ಲಿ ಕೆಂಡ ಹಾಕಿ ವ್ಯಕ್ತಿಯ ಸತ್ಯತೆಯನ್ನು ಪರೀಕ್ಷಿಸುವ ಪದ್ಧತಿ ಇತ್ತು. ಬೆಂಕಿ ಕೆಂಡ ಸತ್ಯವಂತರಿಗೆ ಏನೂ ಮಾಡುವುದಿಲ್ಲ ಎಂಬ ನಂಬಿಕೆ. 'ಕೆಂಡಸ್ನಾನ' ವಿಶಿಷ್ಟ ನಂಬಿಕೆಯನ್ನೊಳಗೊಂಡ ಇನ್ನೊಂದು ಬಗೆಯ ಆಚರಣೆ ಹರಕೆ ಹೊತ್ತು ಈ ಕಾರ್ಯ ಮಾಡುತ್ತಾರೆ. ಅನ್ಯರ ಕೆಟ್ಟನೋಟದಿಂದ ದೃಷ್ಟಿಯಾಗಿದ್ದರೆ ಕೆಂಡವನ್ನುಪಯೋಗಿಸಿ 'ಇಳಿ ತೆಗೆಯುವ' ಮೂಲಕ ಅದನ್ನು ಪರಿಹರಿಸಬಹುದೆಂಬ ನಂಬಿಕೆ. ಒಂದು ಚೆರಿಗೆಯಲ್ಲಿ ಕೆಂಡವನ್ನು ತುಂಬಿ 'ಕಾಲ್ದೂಳಿ' ತೆಗೆಯುವದು. ಕೆಂಡಕ್ಕೆ ಮಳೆಯನ್ನು ನಿಲ್ಲಿಸುವ ಶಕ್ತಿ ಇದೆ ಎಂಬ ನಂಬಿಕೆ ಅಲ್ಲಲ್ಲಿ ಇದೆ. ಅತಿವೃಷ್ಟಿಯಾಗುತ್ತಿದ್ದರೆ ರೈತರ ಮನೆಯ ಹೆಣ್ಣುಮಕ್ಕಳು ಮತ್ತು ಚಿಕ್ಕ ಮಕ್ಕಳು ಅಂಗಳದಲ್ಲಿ ನಿಂತು ಆಕಾಶಕ್ಕೆ ಕೆಂಡ ತೂರುವ ಸಂಪ್ರದಾಯ ಧಾರವಾಡ ಕಡೆ ಪ್ರಚಲಿತದಲ್ಲಿದೆ. ಇದಕ್ಕೆ ಇಮಿಟೇಶನ್ ಮ್ಯಾಜಿಕ್‌ನ ಒಂದು ವಿಧ. ಕೆಂಡ ಹಾಯುವುದು ವಿಶ್ವದ ಅನೇಕ ಕಡೆಗಳಲ್ಲಿ ರೂಢಿಯಲ್ಲಿರುವ ಒಂದು ಸಂಪ್ರದಾಯ. ಕೆಂಡದ ರಾಶಿಯನ್ನು ಹರಡಿ ಅದರ ಮೇಲೆ ಓಡುತ್ತಾ ಹೋಗುವುದು ಇದರ ಮುಖ್ಯಾಂಶ. ಇದು ವೀರಭದ್ರ ದೇವರ ಮತ್ತು ಗ್ರಾಮದೇವತೆಯ ಜಾತ್ರೆಗಳಲ್ಲಿ ನಡೆಯುವ ಸಾಮಾನ್ಯ ಪದ್ಧತಿ.

**೨) ಜ್ವಾಲೆಗೆ ಸಂಬಂಧಿಸಿದ ನಂಬಿಕೆಗಳು:**

ಉರಿಯುವ ನೈಸರ್ಗಿಕ ಅನಿಲದ ಜ್ವಾಲೆಗಳನ್ನು 'ಕೊಳ್ಳಿದೆವ್ವ' ಎಂದು ನಂಬುವರು. ಅವು ಪಂಜು ಹಿಡಿದು ಓಡಾಡುತ್ತಿರುತ್ತವೆ ಎಂಬುದು ಜಾನಪದರ ನಂಬಿಕೆ. ಚಿಕ್ಕಮಗಳೂರು ಜಿಲ್ಲೆಯ ಕೆಲವು ಕಡೆ ಪೂಜಾರಿ ಕೈಯಲ್ಲಿ ಪಂಜು ಹಿಡಿದು ತಂಟೆ ತಕರಾರು ಮಾಡಿದ ಉಭಯಸ್ಥರೂ ರಾಜೀಯಾಗುವ ತೀರ್ಮಾನ ತೆಗೆದುಕೊಳ್ಳತಕ್ಕದ್ದು ಇಲ್ಲದಿದ್ದರೆ ಈ 'ಪಂಜರವಳ್ಳಿ' ಕೋಪಕ್ಕೆ ತುತ್ತಾಗುತ್ತೀರಿ ಎಂದು ರಾಜೀ ಮಾಡಿಸುವ ನಂಬಿಕೆ. ಸತ್ತ ಗಂಡನ ಚಿತೆಯಲ್ಲಿ ಸತಿ ಸಹಗಮನ ಮಾಡುವುದರಿಂದ ಅವಳೂಜ್ವಾಲೆಗಳ ಮೂಲಕ ಪತಿಯ ಜೊತೆ ಸ್ವರ್ಗ ಸೇರುತ್ತಾಳೆಂಬ ನಂಬಿಕೆ. ಉಟ್ಟ ಬಟ್ಟೆಗೆ ಉರಿ ತಗುಲಿದರೆ, ಸ್ವಲ್ಪ ಕಾಲದಲ್ಲಿಯೇ ಆಪ್ತರ ಸಾವು ಖಚಿತವೆಂದು ಬಾವಿಸಲಾಗುತ್ತದೆ. ಒಲೆಯಲ್ಲಿ ಉರಿಯುತ್ತಿರುವ ಬೆಂಕಿ ಮೊರೆಯುವ ಶಬ್ದ ಮಾಡಿದರೆ ಯಾರಾದರೂ ಬಂಧುಗಳು ಬರುತ್ತಾರೆಂದು ಜನಪದರು ನಂಬುತ್ತಾರೆ. ಉರಿಯುವ ಜ್ವಾಲೆಗಳ ಸಮೀಪ ದೆವ್ವ ಬರುವುದಿಲ್ಲವೆಂದೂ, ಮಕ್ಕಳು ಉರಿಗೆ ಬಹಳ ಸಮಯ ಕಾಯಿಸಿಕೊಳ್ಳಬಾರದೆಂದೂ, ಹಾಗೆ ಮಾಡುವುದರಿಂದ ಅವರ ಮದುವೆ ತಡವಾಗುವದೆಂದು ತಿಳಿಯುತ್ತಾರೆ. ಕೆಂಡ ಹಾಯುವ ಪದ್ಧತಿಯಂತೆ ಉರಿಹಾಯುವ ಪದ್ಧತಿಯೂ ಹನುಮಂತ, ವೀರಭದ್ರ ದೇವರುಗಳ ಜಾತ್ರೆಯಲ್ಲಿ ವಿರಳವಾಗಿ ರೂಢಿಯಲ್ಲಿದ್ದು ಪಾಪಿಷ್ಟರು ಇಲ್ಲಿ ಸುಟ್ಟು ಹೋಗುವರು ಎಂಬ ನಂಬಿಕೆಯಿದೆ. ಕನಸಿನಲ್ಲಿ ಉರಿ ಕಂಡರೆ ಬಂಧುಗಳಲ್ಲೊಬ್ಬರ ಸಾವು ಖಚಿತೆಂಬ ನಂಬಿಕೆ. ಮಂಗಳವಾರ ಸತ್ತವರನ್ನು ಸುಡಬಾರದೆಂದೂ, ಹಾಗೆ ಸುಡುವುದೆ ಅನಿವಾರ್ಯವಾದಾಗ ಜೊತೆಯಲ್ಲಿ ಬೇರೆ ಪ್ರಾಣಿಯನ್ನು ಉರಿಯಲ್ಲಿ ಹಾಕಿ ಸುಡಬೇಕೆಂದೂ ನಂಬಿಕೆ ಇದೆ. ಅಸ್ಪೃಶ್ಯರು ಮುಟ್ಟಿದ ಪಾತ್ರೆಗಳನ್ನು ಉರಿಯೊಳಗೆ ಹಾಕಿತೆಗೆದರೆ ಅವು ಶುದ್ಧವಾಗುತ್ತವೆ ಎಂಬಂಥ ಅನಿಷ್ಟ ನಂಬಿಕೆಗಳು ಇವೆ.

**ಗಾಳಿಗೆ ಸಂಬಂಧಿಸಿದ ನಂಬಿಕೆಗಳು:**

ಹಳ್ಳಿಗರು ರಾಶಿಯನ್ನು ತೂರಿ ಜಳ್ಳಿನಿಂದ ಕಾಳನ್ನು ಬೇರ್ಪಡಿಸುವಾಗ, ಗಾಳಿಗೆ ಎಡೆ ಹಿಡಿಯುವ ಪದ್ಧತಿ ಧಾರವಾಡ, ಬೆಳಗಾವಿ, ವಿಜಯಪುರ ಜಿಲ್ಲೆಗಳ ರೈತರಲ್ಲಿ ಈಗಲೂ ಚಾಲ್ತಿಯಲ್ಲಿದೆ. ಗಾಳಿ ಬೀಸದಿದ್ದರೆ 'ಹುಲಿಗೋ ಹುಲಿಗೋ' ಎಂದು ಕೂಗಿದರೆ ಗಾಳಿ ಬೀಸುತ್ತದೆ ಎನ್ನುವ ನಂಬಿಕೆ ಇದೆ. ದನಕರುಗಳಿಗೆ ಬರುವ ಒಂದು ಬಗೆಯ ರೋಗ 'ಗಾಳೆಮ್ಮ ದೇವಿ' ಎಂದು ಜನಗಳ ನಂಬಿಕೆ. ಕೆಲವು ಕಡೆ ಗಾಳೆವ್ವನ ಗುಡಿಗಳೂ ಇವೆ. ಆಕಳು-ಎಮ್ಮೆ ಹಾಲು ಕರೆಯದಿದ್ದರೆ, ಚಿಕ್ಕಮಕ್ಕಳು ಅಳತೊಡಗಿದರೆ 'ಗಾಳಿ ಮಾರೆವ್ವನ ಕಾಟ' ಎನ್ನುವ ನಂಬಿಕೆ ಇದೆ. ಮೂಡಗಾಳಿ ಮೂಡಗಾಳಿ ದಿಕ್ಕಿನಿಂದ ಬೀಸುವ ಗಾಳಿ ಮೂಡಗಾಳಿ. 'ಶೀಗಿ ಹುಣ್ಣಿ ಬುಟ್ಯಾಗ ಮೂಡಗಾಳಿ ಬರತೈತಿ' ಎಂಬ ನಂಬಿಕೆ ಜನಪದರಲ್ಲಿದೆ. ಮೂಡಗಾಳಿ ಬೀಸಿದರೆ ಬೆಳೆ ವಿಪುಲ ಎನ್ನುವ ನಂಬಿಕೆ. ಪೈರು ಮಾಗಲು ಕಾರಣವಾದ ಮೂಡಗಾಳಿ, ಮಾಗಿ ಗಾಳಿ ಎಂತಲೂ ರೈತರು ಕರೆದುದು ಸೂಕ್ತವಾಗಿದೆ. ಪಡುಗಾಳಿ ಇದು ಪಡುವಣ ದಿಕ್ಕಿನಿಂದ ಬೀಸುವ ಗಾಳಿ ಬೇಸಿಗೆ ಕಾಲದಲ್ಲಿ ಆಷಾಢ ಗಾಳಿ ಬೀಸುತ್ತದೆ.

**ದೇವರಿಗೆ ಸಂಬಂಧಿಸಿದ ನಂಬಿಕೆಗಳು:**

ವಿಶ್ವಸೃಷ್ಟಿಯ ಬಗ್ಗೆ ಹೇಳುವಾಗಲೂ ಕೂಡ ದ್ರಾವಿಡ ಕುಲಗಳು ಅಮ್ಮ ಅಪ್ಪನ ಸಂಬಂಧದ ನೆಲೆಯನ್ನೇ ಆಧಾರವಾಗಿಟ್ಟುಕೊಳುತ್ತವೆ. ಇದು ಸಾಂಖ್ಯ ಯೋಗ ಮೊದಲಾದ ದ್ರಾವಿಡ ತತ್ವಜ್ಞಾನಗಳಲ್ಲಿ ಪ್ರಕೃತಿ, ಪುರುಷ, ಕುಂಡಲಿಶಕ್ತಿ ಚಕ್ರಗಳು ಎಂದು ಸಾರ್ವತ್ರಿಕರಿಸಲ್ಪಡುತ್ತದೆ. ಮತಿಯ ಆಚರಣೆಗಳಲ್ಲಿ ಇದು ಗಂಗೆ, ಗೌರಿ, ಶಿವ, ಲಕ್ಷ್ಮಿ, ಚಾಮುಂಡಿ, ನಂಜುಂಡ ಸಾಕಾರಗೊಳ್ಳುತ್ತವೆ. ಜೀವನದ ಪ್ರತಿಘಟನೆ, ವಸ್ತು ವಿವರಳೆಲ್ಲವೂ ಅಮ್ಮನಿಂದ ತುಂಬಿಹೋಗಿದೆ. ಉದಾ: ಎಲ್ಲಮ್ಮ, ಅಣ್ಣಮ್ಮ ಗಂಗಮ್ಮ, ದುರುಗಮ್ಮ, ದ್ಯಾಮವ್ವ 'ಅಮ್ಮ'ನ ಹಬ್ಬ, ಜಾತ್ರೆ, ಉತ್ಸವ, ಆಚರಣೆ ನಂಬುಗೆಗಳಿವೆ.

ದೆವ್ವಕ್ಕೆ ಸಂಬಂಧಿಸಿದ ನಂಬಿಕೆಗಳು: ವಿಶೇಷವಾಗಿ ಯುವಕ ಯುವತಿಯರು ಮದುವೆ ಇಲ್ಲದೆ ತೀರಿಕೊಂಡಾಗ ಜೀವನದಲ್ಲಿ ತಾನು ಬಯಸಿದ ಆವ್ಯಕ್ತಿಯನ್ನೇ ದೆವ್ವಾಗಿ ಕಾಡುತ್ತಾರೆ.

**ಮಾನವನಿಗೆ ಸಂಬಂಧಿಸಿದ ನಂಬಿಕೆಗಳು:**

ಜನಪದ ನಂಬಿಕೆಗಳು ತನ್ನದೇ ಆದ ಪ್ರಾಚೀನತೆಯನ್ನು ಹೊಂದಿದ್ದು, ಗತಕಾಲದ ಬೇಟೆಯ ಸಂಸ್ಕೃತಿಯಿಂದ ಮೊದಲ್ಗೊಂಡು ತತ್ಕಾಲದ ನಗರಿಕರಣ, ಜಾಗತಿಕರಣ ಸಂಸ್ಕೃತಿಯವರೆಗೆ ಒಂದಿಲ್ಲಾ ಒಂದು ರೀತಿಯಿಂದ ಮಾನವ ಜೀವನದಲ್ಲಿ ಹಾಸುಹೊಕ್ಕಾಗಿದೆ. ಅವುಗಳ ಪ್ರಾಚೀನತೆಯನ್ನು ಕುರಿತು ಹೇಳುವುದಾದರೆ, ಭೂಮಿಯ ಮೇಲೆ ಎಂದು ಮಾನವನ ಉಗಮವಾಯಿತೋ ಅಂದೇ ಅವನ ಮನೋಮಂದಿರದಲ್ಲಿ ಅವು ಮೂಡಿದವೆನ್ನಬಹುದು. ಜನಪದ ನಂಬಿಕೆಗಳ ಉಗಮಕ್ಕೆ ಕಾರಣ ಮಾನವನ ಮಾನಸಿಕ ಆಂದೋಳನ, ನೈಸರ್ಗಿಕ ಶಕ್ತಿಯ ಪ್ರಭಾವ ಮತ್ತು ಅಮಾನುಷ ಶಕ್ತಿಯ ಭಯ, ಜನಪದ ಜೀವನದ ಮೂಲ ನಿಧಿಯಾದ ನಂಬಿಕೆಗಳು, ಜನತೆಯ ಬದುಕಿನಲ್ಲಿ ಎಂದೂ ಬತ್ತದ ಗುಪ್ತಗಾಮಿನಿಯಾಗಿರುತ್ತವೆ. ಪಂಡಿತರಿಂದ ಪಾಮರರವರೆಗೆ, ವಿಜ್ಞಾನಿಯಿಂದ ಅಜ್ಞಾನಿಯವರೆಗೆ ಈ ಶಕ್ತಿಯ ಪ್ರಭಾವಕ್ಕೆ ಒಳಗಾಗದ ವ್ಯಕ್ತಿಯೇ ಇಲ್ಲವೆನಿಸುತ್ತದೆ. ಮನುಷ್ಯನ ಇಹ–ಪರ ಬದುಕಿಗೆ ನಂಬಿಕೆಯೇ ಊರುಗೋಲು. ಇಷ್ಟಾರ್ಥ ಸಿದ್ದಿಗಳಿಗೆಲ್ಲ ನಂಬಿಕೆಯೇ ಮೂಲಬೇರು, ಅದಕ್ಕಾಗಿಯೇ ಬಸವಣ್ಣನವರು 'ನಂಬಿ ಕರೆದರೆ ಓ ಎನ್ನನೇ ಶಿವನು' ಎಂದು ನಂಬಿಕೆಗಳಿಗೆ ನಿಷ್ಠೆ ತೋರಿಸಿರಬೇಕು. 'ನಂಬಿ ಕೆಟ್ಟವರಿಲ್ಲವೋ ರಂಗಯ್ಯನ' ಎಂದು ದಾಸರು ಹಾಡಿ ಕುಣಿದಿರಬೇಕು.

ಜನಪದ ನಂಬಿಕೆಗಳು ಜನಜೀವನದಲ್ಲಿ ನಡೆದಾಡುವ ನಾಣ್ಯಗಳಿದ್ದಂತೆ. ಅವು ಜನತೆಯ ಜೀವನಾನುಭವದ ಮೂಸೆಯಿಂದ ಮೂಡಿ ಬಂದು, ಬದುಕಿನಲ್ಲಿ ಬೆರೆತು ಪರಿಣಾಮಕಾರಿಯಾಗಿ ಪ್ರಭಾವಬೀರಿ ಜೀವಂತವಾಗಿದೆ. ಜನಪದ ನಂಬಿಕೆಗಳ ಬಗ್ಗೆ ದೇಶಿಯ ಮತ್ತು ವಿದೇಶಿಯ ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿದ್ದಾರೆ. ಮದುವೆ, ಗೃಹಜೀವನ, ಗರ್ಭಿಣಿ, ಕೂಸು, ಉಡುಗೆ–ತೊಡುಗೆ, ಹಬ್ಬ–ಹರಿದಿನ, ವಾರ–ನಕ್ಷತ್ರ, ಊಟ, ಯಾತ್ರೆ, ಪೂಜೆ, ನಿದ್ರೆ, ಕನಸು, ಅವಯವ, ರೋಗ, ಸುಳಿ ಶುಭಾಶುಭಗಳ ಕಲ್ಪನೆ, ಶಕುನ ಹಾಗೂ ಶವ ಇವೇ ಮುಂತಾದ ವಿಷಯಗಳನ್ನೊಳಗೊಂಡ ಭಾವನಾತ್ಮಕ ಮಾನವ ಸಂಬಂಧಿ ನಂಬಿಕೆಗಳು.

**ಶರಿರಕ್ಕೆ ಸಂಬಂಧಿಸಿದ ನಂಬಿಕೆಗಳು:**

ಕಂಬಕ್ಕೆ ಒಂಟಿ ಕಾಲಿನಿಂದ ನಿಲ್ಲಬಾರದು ಅದು ಲಕ್ಷ್ಮಿಯ ಸಮಾನ ಸುರಕ್ಷತೆಯನ್ನು ಆಧರಿಸಿ ಹುಟ್ಟಿದ ನಂಬಿಕೆಯಿಂದಾಗಿದೆ. ಮಲಗುವಾಗ ಕಾಲನ್ನು ಚಕಲ್–ಮುಕಳ್ ಹಾಕಿ ಮಲಗಬಾರದು ಇಲ್ಲಿ ಅಮಂಗಳ ಭಾವ ನಂಬಿಕೆಗೆ ಗ್ರಾಸ ಒದಗಿಸಿದೆ. ಯಾರಾದರೂ ಸತ್ತಾಗ ಒಂದೇ ಚಟ್ಟದ ಮೇಲೆ ಮಲಗಿಸುವಾಗಲು ಕೆಲವು ಕಡೆಗೆ ಅದೇ ಸ್ಥಿತಿಯಲ್ಲಿ ಮಲಗಿಸುತ್ತಾರೆ. ಅಂಗಾಲು ಕೆರೆದರೆ ಬಡತನ ಬರುತ್ತದೆ. ಅಂಗಾಲು ಸವರಿದರೆ ಭೂತ ಬಡೆದುಕೊಳ್ಳುತ್ತದೆ ಎನ್ನುವಲ್ಲಿ ಕ್ರಮವಾಗಿ ಬೆಂಕಿಯಿಂದ ಹಾಗೂ ಮುಳ್ಳುಗಳಿಂದ ಅಂಗಾಲಿಗೆ ಆಗುವ ಅನಾಹುತವನ್ನು ತಪ್ಪಿಸಲು 'ಭೂತ'ದ ಭಯವನ್ನು ಸೂಚಿಸಿರಬೇಕು. ರೂಪಕ್ಕೆ ಕಣ್ಣು ಮುಂದು ಕಾರ್ಯಕ್ಕೆ ಕೈ ಮುಂದು ಎಂಬಂತೆ ದೈನಂದಿನ ಬದುಕಿನಲ್ಲಿ ಅವುಗಳಿಗೆ ಅಗ್ರ ಸ್ಥಾನ ನೀಡಿರುವನು. ಕಣ್ಣು ನೋಡಿ ರೂಪ ಗುರುತಿಸುವುದು, ಭುಜ ನೋಡಿ ಪೌರುಷ ಗುರುತಿಸುವುದು. ಜನಪದ ಸಾಹಿತ್ಯದಲ್ಲಿ ಕಂಡು ಬರುವ ಸಹಜ ಕ್ರಿಯೆಗಳಾಗಿವೆ. ಕಿವಿ ಇಂಗಿ ಇರಬೇಕು, ಕಣ್ಣು ಹೋಗಿ ಇರಬಾರದು. ತಿನ್ನುವಾಗ ಯಾರಾದರೂ ನೋಡಿದರೆ ಕಣ್ಣು ಕುಟರೆಯಾಗುತ್ತದೆ ಎಂಬುದು ಒಂದು ಸಾಮಾನ್ಯ ನಂಬಿಕೆಯಾಗಿದೆ. ಅಂದರೆ ತಿನ್ನುವವರು ನೋಡುವವರಿಗೆ ಕೊಟ್ಟು ತಿನ್ನಿ ಎಂಬುದೇ ಇಲ್ಲಿಯ ಪ್ರಮುಖ ನೀತಿಯಾಗಿದೆ. ಉಪ್ಪು ತುಳಿದರೆ ಕಣ್ಣು ಕುರುಡಾಗುವವು ಇಂಥ ಕೆಲ ನಂಬಿಕೆಗಳು ಉಪಯುಕ್ತವೆಂದೇ ಹೇಳಬೇಕು. ಉಪ್ಪಿನಲ್ಲಿ ಅನ್ನದ ಸಾರವನ್ನು ಹೆಚ್ಚಿಸುವ ಗುಣವಿದೆ. ಅದಕ್ಕಾಗಿ ಉಪ್ಪಿಗಿಂತ ರುಚಿಯಿಲ್ಲ. "ಹುಬ್ಬಿನ ಕೂದಲು ಕೂಡಿದರೆ ನಪೂಂಸಕರಾಗುವರು", ಮೆಳ್ಳಗಣ್ಣಿನ ಸೊಸೆ ಇದ್ದರೆ ಮನೆ ಏರುತ್ತದೆ,

ಕರಿಕಣ್ಣಿನ ಹೆಣ್ಣನ್ನು ಮದುವೆಯಾದರೆ ಮಸಣ ಸಮೀಪ ಇವೆಲ್ಲ ಕಣ್ಣನ್ನು ಕುರಿತು ರೂಢಿಯಲ್ಲಿರುವ ಅರ್ಥವಿಲ್ಲದ ನಂಬಿಕೆಗಳು. ಕೈಗುಣ ಒಳ್ಳೆಯದು ಎಂದು ಕೊಟ್ಟ ದುಡ್ಡು ಮರಳಿ ಬರದಾಗ ಕೈಗುಣ ಕೆಟ್ಟದ್ದು, ಎಂದು ತೀರ್ಮಾನಿಸುವಲ್ಲಿ ಮೊದಲ ಮಾತಾಗಿ ಬರುತ್ತದೆ. ತಲೆಯ ಮೇಲೆ ಕೈಹೊತ್ತು ಕುಳಿತರೆ ಬಡತನ ಬರುತ್ತದೆ ಕೈಕಟ್ಟಿ ಕುಳಿತುಕೊಂಡರೆ ದಾರಿದ್ರ್ಯ ಅಪ್ಪಳಿಸುತ್ತದೆ, ಎಂಬ ನಂಬಿಕೆಗಳು ಚಿಂತೆ ಹಾಗು ದಾರಿದ್ರ್ಯದ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿದ್ದು. ಆಕಳಿಸುವಾಗ ಕೈಬೆರಳ ಚಟಕಿ ಹೊಡೆಯಬಾರದು ಆಕಳಿಕೆ ನಿದ್ರೆಯ ಸೂಚನೆಯನ್ನು ನೀಡುವುದಾಗಿದೆ. ಆರು ಬಟ್ಟಿನ ಕೂಸು ಹುಟ್ಟಿದರೆ ಅನ್ನ ಹೆಚ್ಚುವುದು ಮುತ್ತೈದೆಯರು ಮುಂಗೈಗೆ ಹಸಿರು ಬಳೆ ಧರಿಸಬೇಕು. ಅಂಗೈ ತುರಿಸಿದರೆ ರೊಕ್ಕ ಖರ್ಚಾಗುವವು, ಹೆಣ್ಣು ಮಕ್ಕಳ ಕೈಮೇಲೆ ಕೂದಲು ಇದ್ದರೆ ಬೇಗನೆ ಅಮಂಗಲೆಯರಾಗುವರು. ಇಂಥ ನಂಬಿಕೆಗಳಿಗೆ ಅರ್ಥ ಹುಡುಕುವುದು ಕಷ್ಟದ ಕೆಲಸವೆಂದೇ ಹೇಳಬೇಕು. ಮೂಗು ಉದ್ದ ಇದ್ದವರು ಪುಣ್ಯವಂತರು ಎಂಬ ನಂಬಿಕೆ ಇದೆ. ದಂಡಿ ಕಟ್ಟುವ ಮೊದಲು ಹಣೆಗೆ ಮುಟ್ಟಿಸಿ ಕಟ್ಟಬೇಕು, ಎಂಬುದು ಹಣೆಯ ಭಾಗದ ಉತ್ತಮಿಕೆಯನ್ನು ತಿಳಿಸಿಕೊಡುತ್ತದೆ. ಜನಪದೀಯ ಮನೋಭಾವದಲ್ಲಿ ಹಣೆ ಆತ್ಮದ ಸಂಕೇತವೆಂಬ ಪವಿತ್ರ ನಂಬಿಕೆಯಿದೆ. ಹೆಣ್ಣು ಮಕ್ಕಳು ತಲೆಯ ಮೇಲಿನ ಸೆರಗು ತೆಗೆದು ತಿರುಗಬಾರದು, ಎಂಬುದು ಫ್ಯಾಶನ್ನಿನ ಹೆಸರಿನಲ್ಲಿ ಹದಗೆಟ್ಟ ಸ್ತ್ರೀ ಸಂಸ್ಕೃತಿಯನ್ನು ತೋರಿಸಿಕೊಟ್ಟರೆ, ಗಂಡಿಗೆ ಎದೆಯ ಎಡಭಾಗದಲ್ಲಿ ಹಾಗೂ ಹೆಣ್ಣಿಗೆ ಎದೆಯ ಬಲಭಾಗದಲ್ಲಿ ಮಚ್ಚೆ ಇರಬಾರದು. ಎಂಬವು ಲಕ್ಷ್ಮಣಾತ್ಮಕ ನಂಬಿಕೆಗಳಾಗಿ ಬದುಕಿನಲ್ಲಿ ಹುದುಗಿಕೊಂಡಿವೆ. ಕೂದಲನ್ನು ಕುರಿತ ಕೆಲ ನಂಬಿಕೆಗಳು ಪ್ರಚಲಿತವಾಗಿವೆ. ಮೂಗಿನ ಹೊರಳೆಯಲ್ಲಿಯ ಕೂದಲನ್ನು ಕತ್ತರಿಸಬಾರದು ಇದು ಆರೋಗ್ಯದಾಯಕ ನಂಬಿಕೆ. ಉಸಿರಾಟಕ್ಕೆ ಮೂಲ ಸಾಧನ ಮೂಗು. ಕಲುಷಿತವಾತಾವರಣದಲ್ಲಿಯ ಧೂಳಿನ ಕಣಗಳು ಹಾಗೂ ರೋಗವರ್ಧಕ ಕ್ರಿಯೆಗಳು. ಒಳಗೆ ಹೋಗದೇ ತಡೆಯುವಲ್ಲಿ ಮೂಗಿನ ಕೂದಲು ಪ್ರಮುಖ ಪಾತ್ರವಹಿಸುವ ಹಿನ್ನೆಲೆ ಇದಕ್ಕಿರಬೇಕು. ಅಲ್ಲದೆ ಕೂದಲು ಕತ್ತರಿಸುವಾಗ ಮೂಗಿಗೆ

ಗಾಯವಾಗಿ ಊನವಾಗಬಹುದೆಂಬ ಕಾರಣವೂ ಇರಬಹುದೆನಿಸುವುದು.

**ಬಾಯಿಗೆ ಸಂಬಂಧಿಸಿದಂತೆ ಕೆಲ ನಂಬಿಕೆಗಳು:**

ಬಾಯಿ ತೆರೆದುಕೊಂಡು ಅಂಗಾತ ಮಲಗಬಾರದು, ಬಾಚಣಿಕೆ ಬಾಯಲ್ಲಿಟ್ಟುಕೊಂಡರೆ ಬಾಯಿಬಸಳ ರೋಗ ಬರುತ್ತದೆ. ಬಾಯಿಬಸಳೆ ರೋಗ ಬಾಯಲ್ಲಿ ಬಾಯಲ್ಲಿ ಬಾಚಣಿಕೆ ಇಡುವುದರಿಂದ ಬರುವುದೆಂದು ಕೆಲ ಕಡೆಗೆ ನಂಬಿಕೊಂಡಿದ್ದಾದರೆ, ಎಂಜಲು ತಿಂದರೆ ಬರುವದಂದು ಮತ್ತೆ ಕೆಲವರ ನಂಬಿಕೆ. ಹಲ್ಲಿನಿಂದ ಉಗುರು ಕಡೆಯಬಾರದು ಹಾಗೆ ಕಡಿದರೆ ವಿಷವೇರುವುದು, ಉಗುರಿನಲ್ಲಿಯ ಹೊಲಸು ಹೊಟ್ಟೆಯೊಳಗೆ ಹೋಗಿ ರೋಗ ಬರುವುದೆಂಬುದು ಜನಪದರ ನಂಬಿಕೆಯಾಗಿದೆ. ಕತ್ತರಿಸಿದ ಉಗುರನ್ನು ಮನೆಯಲ್ಲಿ ಬಿಡಬಾರದು ಹಾವು ಚೇಳು ಬರುವವು. ಚೂಪಾದ ಉಗುರುಗಳು ಚುಚ್ಚುವ ಸಾಧ್ಯತೆ ಇದೆ. ಊಟಕ್ಕೆ ಸಂಬಂಧಿಸಿದಂತೆ ಕೆಲ ನಂಬಿಕೆಗಳಿವೆ ಊಟ ಮಾಡದೇ ಮೈಚೆಲ್ಲಬಾರದು, ಊಟ ಮಾಡಿದ ಮೇಲೆ ಮೈಮುರಿಯಬಾರದು, ಇವೆಲ್ಲ ಆರೋಗ್ಯದಾಯಕ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ನಂಬಿಕೆಗಳಾಗಿವೆ.

**ಊಟ ಉಡುಗೆಗೆ ಸಂಬಂಧಿಸಿದಂತೆ ನಂಬಿಕೆಗಳು:**

ಹಿಂಬಡಪೂರ್ತಿ ಕಾಲು ತೊಳೆದು ಊಟಕ್ಕೆ ಕುಳಿತುಕೊಳ್ಳಬೇಕು, ಊಟಕ್ಕೆ ಕುಳಿತಾಗ ಉಂಡೆ ಕಟ್ಟಿ ತಿಂದರೆ ಆಯುಷ್ಯ ಕಡಿಮೆ, ಹಿಂಬಡದ ಮೇಲೆ ಸ್ವಲ್ಪ ತಗ್ಗು ಭಾಗವಿದ್ದು, ನಡೆದಾಡುವಾಗ ಅಲ್ಲಿ ಹೆಚ್ಚು ಧೂಳು ಸೇರುವ ಸಾಧ್ಯತೆಯಿದೆ. ಮುಂದಿನಿಂದ ಹಾಕಿಕೊಂಡ ನೀರು ಹಿಮ್ಮಡಕ್ಕೆ ಮುಟ್ಟದೆ ಇರಬಹುದು. ಉಡಪನ್ನು ಕುರಿತು ಉಪಯುಕ್ತ ಮತ್ತು ನಿಷೇಧಾತ್ಮಕ ನಂಬಿಕೆಗಳು ಹುಟ್ಟಿಕೊಂಡಿವೆ. ಊಟ ಮಾಡುವಾಗ ತಟ್ಟೆಯಲ್ಲಿ ಬಿದ್ದೀತು ಎಂಬ ಮುನ್ನಚ್ಚರಿಕೆಯ ಕ್ರಮವಾಗಿ, ಟೊಪ್ಪಿಗೆ ಹಾಕಿಕೊಂಡು ಊಟ ಮಾಡಬಾರದು ಎಂಬ ನಂಬಿಕೆ. ಸೀರೆಯ ದಡಿಗೆ ದಕ್ಕೆಯಾದೀತು ಎಂಬ ಎಚ್ಚರಿಕೆಯನ್ನು ನೀಡಲು ಉಟ್ಟ ದಟ್ಟಿಯನ್ನು ಉಂಗುಟಕ್ಕೆ ಹಾಕಿ ಮೀಟಬಾರದು ಎಂಬ ನಂಬಿಕೆ ಆಚರಣೆಯಲ್ಲಿದೆ. ಹೊಲಿಯುವ ಸೂಜಿ ಮೈಗೆ ತಾಗಿ ಅಪಾಯವಾದೀತು ಎಂದು ಎಚ್ಚರಿಕೆನ್ನು ನೀಡಲು ಮೈಮೇಲಿನ ಬಟ್ಟೆ ಹೊಲಿಯಬಾರದು. ಸ್ತ್ರೀನೀತಿಯನ್ನು ಬೋಧಿಸಲು ಸೆರಗು ತೆಗೆದು ಓಡಾಡಬಾರದು ಎಂಬ ನಂಬಿಕೆ ಬೋಧನೆ ನೀಡುತ್ತದೆ. ಆಕಾಶದಲ್ಲಿ ಧೂಮಕೇತು ಮೂಡಿದರೆ ದೇಶದ ದೊಡ್ಡ ವ್ಯಕ್ತಿಗೆ ಆಪತ್ತು, ಯುಗಾದಿ ದಿವಸ ಬೇವಿನ ತಪ್ಪಲು ನೀರಲ್ಲಿ ಹಾಕಿ ಸ್ನಾನ ಮಾಡಬೇಕು, ಚಳಿಗಾಲದಲ್ಲಿ ಹೆಣ್ಣು ನೋಡಲು ಹೋಗಬಾರದು, ಶಿವರಾತ್ರಿಯ ದಿವಸ ಸತ್ತರೆ ಸ್ವರ್ಗ ಸಿಗುವುದು, ಇಂಥ ನಂಬಿಕೆಗಳು ಅರ್ಥವತ್ತಾಗಿದ್ದು, ದೈನಂದಿನ ಜೀವನಕ್ಕೆ ಯೋಗ್ಯವಾದ ಜೀವನ ಸೂತ್ರವನ್ನು ಸೂಚಿಸುವಲ್ಲಿ ತೆರೆದಿಟ್ಟ, ಪುಸ್ತಕದಂತಿವೆ. ವಾರ ನಕ್ಷತ್ರಗಳಿಗೆ ಸಂಬಂಧಿಸಿದ ಇಂಥ ನಂಬಿಕೆಗಳು ದೇಶ ಮತ್ತು ಜನಾಂಗ ಭಿನ್ನತೆಗೆ ತಕ್ಕಂತೆ ವಿಭಿನ್ನ ರೂಪಗಳನ್ನು ಹೊಂದುವುದೆಂಬುದು ಗಮನಾರ್ಹವಾದುದು. ಬದುಕಿದ್ದವರ ಫೋಟೋ ಪೂಜಿಸಿ ಗಂಧ ಕುಂಕುಮ ಹಚ್ಚಬಾರದು. ಸತ್ತ ನಂತರವೇ ಎಂಬ ನಂಬಿಕೆಯಿಂದ ಇಂಥ ಕೆಲ ವಿಧಿ–ನಿಷೇಧಗಳು ಆಚರಣೆಯಲ್ಲಿ ಬಂದಿರಬಹುದು. ಒಳ್ಳೆ ಕೆಲಸಕ್ಕೆ ಹೋಗುವಾಗ ಮೂರು ನಾಮದೇವರು ಎದುರಾದರೆ ಅಪಶಕುನ, ಕರಿ ಹಾರುವನ್ನು ಬಿಳಿ ಕೋಮಟಿಗನನು ನಂಬಬಾರದು, ಮುಂಜಾನೆದ್ದು ಕರಿಗಾಣಿಗನ ಮುಖ ನೋಡಬಾರದು, ಬಯಕೆ ಹತ್ತಿದ ಗರ್ಭಿಣಿ ಎರಿಮಣ್ಣು ಹುಟ್ಟುವ ಮಗ ರಾಜನಾಗುವನು, ಹೆಂಡತಿ ಗರ್ಭಿಣಿಯಾದಾಗ ಗಂಡ ಗಡ್ಡ ಬಿಡಬೇಕು, ಇಂಥ ಕೆಲ ನಂಬಿಕೆಗಳು ಜನರ ಅಜ್ಞಾನದ ದ್ಯೋತಕವಾಗಿ ಹುಟ್ಟಿಕೊಂಡಿದ್ದು, ದಕ್ಷತೆಯ ಕೊರತೆಯಿಂದ ಮಾಡುವ ಕೆಲಸ ಕೆಟ್ಟರೂ, ಅರ್ಹತೆಯನ್ನು ಲಕ್ಷಿಸಿದೆ ಮೇಲ್ಕಂಡ ನಂಬಿಕೆಗಳಲ್ಲಿ ಬರುವ ವಿವಿಧ ವ್ಯಕ್ತಿಗಳ ಕಡೆಗೆ ಬೆರಳು ತೋರಿಸಿ, ಆರೋಪಿಸುವ ಅನಿಷ್ಠ ಪದ್ಧತಿ ಅಂಟುರೋಗದಂತೆ ಸಮಾಜವನ್ನು ಆವರಿಸಿಕೊಂಟಿದೆ. ತುಂಬಿದ ಕೆರೆಗೆ ಕಲ್ಲು ಹೊಡೆಯಬಾರದು, ಉಂಡ ಮನಿಗೆ ಎರಡು ಬಗೆಯಬಾರದು ಮಾನವ ಬದುಕಿನ ಆಗಿಹೋಗುಗಳನ್ನು ತಿಳಿಸುವ ಪ್ರತಿಮೆಗಳು ಈ ನಂಬಿಕೆಗಳ ಹೃದಯವಾದ ಮೂಲಕ ಮಾನವ ಸಂಬಂಧಿ ನಂಬಿಕೆಗಳು ಜನ ಸಾಮಾನ್ಯರ ಭಾವನಾಭಿವ್ಯಕ್ತಿಯಾಗಿವೆ.

**ಪ್ರಾಣಿಗೆ ಸಂಬಂಧಿಸಿದ ನಂಬಿಕೆಗಳು:**

ನಂಬಿಕೆಗಳು ಸಮುದಾಯದ ಭಾವನಾತ್ಮಕ ಮುಖವಾದರೆ ಆಚರಣೆಗಳು ಅದರ ಕ್ರಿಯಾತ್ಮಕ ಮುಖ. ಇವೆರಡಕ್ಕೂ ಅನ್ಯೋನ್ಯ ನಂಟು. ಇವುಗಳಲ್ಲಿ ಎಷ್ಟೋ ವೇಳೆ ತರ್ಕಬದ್ಧತೆ ಇಲ್ಲದಿದ್ದರೂ ಸಮುದಾಯದ ಒತ್ತಾಸೆಯಿಂದ ವಿಶ್ವಾಸಾರ್ಹವಾಗುತ್ತದೆ. ನಂಬಿಕೆಗಳು ಹಾಗೆ ನೋಡಿದರೆ ಸಾರ್ವತಿಕ. ಆದರೂ ಪ್ರದೇಶಿಕ ಗುಣಲಕ್ಷಣಗಳನ್ನು ಹೊಂದಿರುತ್ತವೆ. ಸಮಾನತೆ ಮತ್ತು ಪರಸ್ಪರ ವೈರುಧ್ಯಗಳನ್ನು ಹೊಂದಿರಲು ಸಾಧ್ಯ, ಆಯಾ ಪ್ರದೇಶದ ಭೌಗೀಲಿಕ ಹಿನ್ನೇಲೆ ಸಾಮಾಜಿಕ ಒತ್ತಡ, ಜೀವನ ಪರಿಸರ, ಆಲೋಚನಾ ವಿಧಾನಗಳು ನಂಬಿಕೆಗಳು ಮೇಲೆ ಪ್ರಭಾವ ಬೀರುತ್ತವೆ. ಪ್ರಾಣಿ ಮತ್ತು ಮನುಷ್ಯನ ಸಂಬಂಧ ನಿರ್ಧಾರವಾಗುತ್ತದೆ. ನಂಬಿಕೆಗಳ ಸಾಂಸ್ಕೃತಿಕ ಮಾದರಿಗಳ ವಿನ್ಯಾಸಗಳನ್ನು ಅರ್ಥಮಾಡಿಕೊಳ್ಳುವ ಸಲುವಾಗಿ ನಾಯಿ ಮತ್ತು ಬಸವನ ಬಗ್ಗೆ ಇರುವ ನಂಬಿಕೆಗಳನ್ನು ಮತ್ತು ಅದರಿಂದ ರೂಪಿತಗೊಂಡಿವೆ, 'ನಾಯಿಗೆ ಒದೆಯಬಾರದು', 'ನಾಯಿಗೆ ಬರಲಲ್ಲಿ ಹೊಡೆಯಬಾರದು', 'ನಾಯಿ ತನ್ನ ಒಡತಿಗೆ ಮತ್ತೆರಡು ಕಣ್ಣು ಬರಲೆಂದು ಹಾರೈಸುತ್ತದೆ', 'ನಾಯಿ ನಾರಾಯಣ', 'ನಾಯಿ ತಾಯಿಗೆ ಸಮ', ನಾಯಿ ಅಳಬಾರದು ಇತ್ಯಾದಿ. ಮನುಷ್ಯ ಸಂಸ್ಕೃತಿ ಬೇಟೆ ಕಡೆಯಿಂದ ಪಶುಪಾಲನೆ, ವ್ಯವಸಾಯ, ಸಾಕುಪ್ರಾಣಿಗಳ ಸಂಸ್ಕೃತಿಯ ಕಡೆಗೆ ಪಲ್ಲಟಗೊಳ್ಳುವ ಹೊತ್ತಿನಲ್ಲಿ ಇಂಥ ನಂಬಿಕೆಗಳು ಹುಟ್ಟಿರಬಹುದು. ಕೆಲವು ಪ್ರಾಣಿಗಳು ಆತ್ಮರಕ್ಷಕ, ಕುಲಬಂಧು, ವಿಪತ್ತಿನಲ್ಲಿ ಸಹಾಯಕ್ಕೆ ಬಂದವು ಎನ್ನುವ ಪೂಜ್ಯತೆಯಿಂದಲೂ ನಂಬಿಕೆಗಳು ಚಲಾವಣೆಗೆ ಬಂದಿವೆ.

ಮೊಟ್ಟೆ ಇರುವೆ ಕಚ್ಚಿದರೆ, ಕಾಗೆ ಗುಬ್ಬಿಗಳು ನೀರಿನಲ್ಲಿ ಸ್ನಾನ ಮಾಡಿದರೆ, ಕಪ್ಪೆ ನಿರಂತರವಾಗಿ ಕೂಗಿದರೆ, ಕೋಳಿಮರಿಗಳು ಗಾಳಿಗೆದುರಾಗಿ ಪುಕ್ಕವನೆತ್ತಿ ನಿಂತರೆ, ಮುಸ್ಸಂಜೆಯಲ್ಲಿ ಗೂಬೆ ಕೂಗಿದರೆ ಮಳೆಯಾಗಿತ್ತದೆ. ಗೋವು ನರಿಗಳ ಮುಖ ನೋಡಿದರೆ, ಕನಸಿನಲ್ಲಿ ಕೋಳಿ, ಹುಂಜ, ಹಂಸ, ಆನೆ ಕಂಡರೆ ಮಾತನಾಡುವಾಗ ಹಲ್ಲಿ ಲೊಚಗುಟ್ಟಿದರೆ, ಹಿತ್ತಲಲ್ಲಿ ಜೇನುಗೂಡು ಕಟ್ಟಿದರೆ ಶುಭ ಉಡ ಮನೆಹೊಕ್ಕರೆ, ಹಾಲು ಕರೆಯುವಾಗ ಆಕಳು ಮೈಮೇಲೆ ಮಲಗಿದರೆ, ರಾತ್ರಿ ಕಾಗೆ ಕೂಗಿದರೆ, ನೆತ್ತಿಗೆ ಬಡಿದರ ಅಶುಭ. ಹಾವು ಕಾಲಿನಿಂದ ತಲೆಗೆ ಹತ್ತಿದರೆ ಐಶ್ವರ್ಯವಂತನಾಗುವ ಸೂಚನೆ. ಕೆಳಗಿಳಿದರೆ ಕಷ್ಟಬರುವುದು ಸಂಕೇತ. ನಾಯಿ ದನಕರುಗಳ ಕಣ್ಣಿಗೆ ಭೂತದೆವ್ವಗಳ ಕಾಣಿಸುತ್ತವೆ. ಅದಕ್ಕಾಗಿ ಅವುಗಳು ವಿಚಿತ್ರವಾಗಿ ಒಮ್ಮೊಮ್ಮೆ ಕೂಗುತ್ತವೆ. ಎತ್ತು ದನಗಳು ತಮ್ಮೊಡೆಯನಿಗೆ ಕೇಡಾಗುವುದನ್ನು ತಮ್ಮದೇ ಭಾಷೆಯಲ್ಲಿ ತಿಳಿಸುತ್ತವೆ. ಹಾವು ಕಚ್ಚಿದಾಗ 'ಕಚ್ಚಿದೆ' ಎನ್ನದೆ 'ಬಳ್ಳಿ ಮುಟ್ಟಿತು' ಅಥವಾ 'ಹುಳು ಮುಟ್ಟಿತು' ಎನ್ನಲಾಗುತ್ತದೆ. ರಾತ್ರಿ ಹೊತ್ತಿನಲ್ಲಿ ಟಿಟ್ಟಿ ಟಿಂವ ಪಕ್ಷಿ ಕೂಗಿದ್ರೆ ಅಪಶಕುನ, ಅದಕ್ಕೆ ಮುಂಬಾಗಿಲಿಗೆ ನೀರು ಹಾಕಬೇಕು. ಕೆಲವು ಪ್ರಾಣಿ ಪಕ್ಷಿಗಳ ಗರಿ, ಮುಳ್ಳು, ಕೂದಲು, ಉಗುರು ಮನೆಯೊಳಕ್ಕೆ ತಂದರೆ ಜಗಳವಾಗುತ್ತದೆ ಆರೋಗ್ಯ ಕೆಡುತ್ತದೆ. ದರಿದ್ರ ಪ್ರಾಪ್ತಿಯಾಗುತ್ತದೆ. ಮನೆಯಲ್ಲಿ ಹುಟ್ಟಿದ ಹೋರಿ–

ಕರುಗಳನ್ನು ಮಾರಬಾರದು. ಇವು ನಿಷೇಧಾತ್ಮಕ ನಂಬಿಕೆಗಳು. ಹಲ್ಲಿ, ನಾಯಿ, ನರಿ, ಕತ್ತೆ, ಕಾಗೆ, ಹುಂಜ, ಗಿಳಿ ಶಕುನದ ಪ್ರಾಣಿಗಳೆಂದು ನಂಬಿ ಅವುಗಳ ಒಂದೊಂದು ಚಟುವಟಿಕೆಯನ್ನು ಶುಭ-ಅಶುಭ ಸೂಚಕವಾಗಿ ವ್ಯಾಖ್ಯಾನಿಸಲಾಗುತ್ತದೆ.

**ಸಸ್ಯ ಸಂಬಂಧಿ ನಂಬಿಕೆಗಳು:**
ಈ ವ್ಯಾಪ್ತಿ ದೊಡ್ಡದು. ಅದರ ಪ್ರತಿಯೊಂದು ಬೇರು, ಗಡ್ಡೆ, ಕಾಂಡ ಟೊಂಗೆ ಅವುಗಳಿಂದ ಹೊರಡುವ ಹಾಲು, ಅಂಟು, ರಸ, ಎಲೆ, ಹಣ್ಣು, ಬೀಜ, ಕಟ್ಟಿಗೆ ಇದ್ದಲಿ ಅವುಗಳಿಂದ ತಯಾರಿಸಿದ ಸಾಮಗ್ರಿಗಳು: ಕಂಡುಹಿಡಿದ ನಂಬಿಕೆ ರೂಪದ ಔಷಧಿಗಳವರೆಗೆ ಸಸ್ಯನಂಬಿಕೆಯ ಪ್ರಪಂಚ ಹರಡಿಕೊಂಡಿದೆ. ಧಾರ್ಮಿಕ ಹಿನ್ನಲೆಯಲ್ಲಿ ಹುಟ್ಟಿದ ನಂಬಿಕೆಗಳು ಆಲ, ಅರಳೆ, ಬೇವು, ಹೊನ್ನಿ, ತುಳಸಿ, ಎಕ್ಕೆ, ಉತ್ತರಾಣಿ ಮುಂತಾದವುಗಳನ್ನು ಮಾನವ ದೇವರೆಂದು ಆರಾಧಿಸುತ್ತ ಬಂದಿದ್ದಾನೆ. ಈ ಕುರಿತ ಕೆಲ ನಂಬಿಕೆಗಳು; ಮಂಜಾನೆದ್ದು ಆಲ, ಆರಳೆ, ಬೇವಿನ ಗಿಡಗಳನ್ನು ನೋಡಬೇಕು. ಶಿವರಾತ್ರಿ ದಿವಸ ಶಿವ ಎಕ್ಕೆ ಗಿಡದಲ್ಲಿ ವಾಸ ಮಾಡುತ್ತಾನೆ, ಮದುವೆಯಾದವರು ತುಳಸಿ ಗಿಡ ಪೂಜೆ ಮಾಡಬೇಕು, ಆಲದ ಮರದ ಕೆಳಗೆ ಕುಳಿತು ಸುಳ್ಳು ಹೇಳಬಾರದು, ಬನ್ನಿ, ಪತ್ರಿ ಗಿಡಗಳನ್ನು ಕಡಿಯಬಾರದು, ಅವುಗಳ ಕಟ್ಟಿಗೆ ಸುಡಬಾರದು, ದೇವರ ಕಟ್ಟಿಗೆ ಕದಿಯಬಾರದು. ಇಂಥ ಪವತ್ರ ಗಿಡಗಳಿಂದ ಉಪಕರಣಗಳನ್ನು ಮಾಡಿದರೆ ಶುಭವಾಗುತ್ತದೆ, ಬನ್ನಿ ಗಿಡದಿಂದ ಮೇಟಿಯನ್ನು ಮಾಡಬೇಕು, ಹೊನ್ನಿ ಕಟ್ಟಿಗೆಯನ್ನು ತಲೆಬಾಗಿಲಕ್ಕೆ ಉಪಯೋಗಿಸಬೇಕು, ಅರಗ್ಯಾನ ಗಿಡದಿಂದ ರಾಗೊಲ ಮಾಡಿಸಬೇಕು, ಉತ್ತರಾಣಿ ಕಡ್ಡಿಯಿಂದ ಮಾಡಿದ ಸೆಳ್ಳನ್ನು ಕಣದಲ್ಲಿ ಬಳಸಬೇಕು. ಹೀಗೆ ಕೆಲವು ಸಸ್ಯಗಳು ಪೂಜ್ಯವೆನಿಸಿದರೆ, ಮತ್ತೆ ಕೆಲವು ಪೂಜ್ಯ ಅಪವಿತ್ರವೆನಿಕೊಂಡಿವೆ. ಉದಾ:ಸಿಂದಿಗಿಡ, ಕಣಗಲ ಮುಂತಾದ ಗಿಡಗಳಿಂದ ತಯಾರಿಸಿದ ಉಪಕರಣಗಳನ್ನು ಪವಿತ್ರ ಸ್ಥಳ, ಶುಭ ಸಮದಬ್ದಲ್ಲಿ ಬಳಸಬರದೆಂಬ ನಂಬಿಕೆ, ಸಿಂದಿ ಹೆಡಿಗೆ ಕಸಬರಗೆಗಳನ್ನು ಅಡಿಗೆ ಮನೆ, ದೇವರ ಮನೆ ಮತ್ತು ಕಣದಲ್ಲಿ ಉಪಯೋಗಿಸಬಾರದು, ಗೂಗೆ ಮನೆ ಹೊಕ್ಕರೆ ಬಾಗಿಲಿಗೆ ಬಾರಿಕಂಟಿ ಹಚ್ಚಿ ಮೂರು ತಿಂಗಳು ಮನೆ ಬಿಡಬೇಕು. ಕಣಗಲ ಮತ್ತು ಚೆಂಡು ಹೂಗಳನ್ನು ದೇವರಿಗೆ ಏರಿಸಬಾರದು.
ಪೂಜ್ಯವೆನಿಸಿದ ಗಿಡಗಳನ್ನು ಹೆಣ್ಣು ಗಂಡು ಎಂದು ಕಲ್ಪಿಸಿ ಅವುಗಳಿಗೆ ಮಾನವರಂತೆ ಮದುವೆ ಮೊದಲಾದ ಶುಭ ಕಾರ್ಯ ಏರ್ಪಡಿಸುವ ಸಂಪ್ರದಾಯ ನಂಬಿಕೆ. ಆಲ, ಅರಳಿ, ಬನ್ನಿ ಮರಗಳೊಂದಿಗೆ ಬೇವು ಬೆಳೆದರೆ ಅವುಗಳಗೆ ಮದುವೆ ಮಾಡಬೇಕು. ತುಳಸಿ ಲಗ್ನ ಮಾಡಬೇಕು, ತೆಂಗು, ಮಾವು, ಬಾಳೆ ಫಲ ಬಿಟ್ಟಾಗ ಕುಪ್ಪಸ ಮಾಡಬೇಕು. ದೇವರಿಗೆ ತೆಂಗು, ಕುಂಬಳಕಾಯಿ ಒಡೆಯಬೇಕು, ದೇವರಿಗೆ ನಿಂಬೆಕಾಯಿಗಳನ್ನು ನಿವಾಳಿಸಿ ಸೀಳಿ ತೆಗೆಯಬೇಕು. ಬೂದನ ರಾಶಿಯನ್ನು ಮಠಗಳಿಗೆ, ಪೂಜಾರಿಗಳಿಗೆ ಕೊಡಬೇಕು. ದೇವರಿಗೆ ಮದ ಅರ್ಪಿಸಬೇಕು. ಕುಂಬಳಕಾಯಿಯನ್ನು ಬ್ರಾಹ್ಮಣರಿಗೆ ಕೊಡಬೇಕು. ಮೇಟಿಗೆ ತೆನೆಯನ್ನು ಕಟ್ಟಬೇಕು. ದೇವರಿಗೆ ತೆಂಗಿನ ಇಡಗಾಯಿ ಇಡಬೇಕು. ತೆಂಗನ್ನು ಒದೆಯಬಾರದು. ಒಡೆದ ತೆಂಗಿನಕಾಯಿಯನ್ನು ಮತ್ತೆ ಕೂಡಿಸಬಾರದು, ಎಲೆ-ಅಡಿಕೆ ತಿಂದಾಗ ಬಾಯಿ ಕೆಂಪಾದ್ರೆ ಗಂಡ ಹೆಂಡತಿ ಪ್ರೀತಿಯಿಂದ ಇರುವರಂತೆ, ಕುಡಿ ಇದ್ದ ಎಲೆ ದೇವರಿಗೆ ಅರ್ಪಿಸಬೇಕು. ಬಾಳೆಯ ಗೊನೆಯನ್ನು ಕಳ್ಳರು ಕಡಿದುಕೊಂಡು ಹೋದಾಗ ಆ ಭಾಗಕ್ಕೆ ಸುಣ್ಣ ಹಚ್ಚಿದರೆ ಕಡಿದವರ ಮನೆ ಹಾಳಾಗುತ್ತದೆ. ತೆಂಗು, ಬಾಳೆ ಕಡಿಯಬಾರದು. ಗೋಧಿ, ಜೋಳ, ಭತ್ತ, ಎಲೆ,ಅಡಿಕೆ, ಬಾಳೆ, ತೆಂಗು, ಅರಿಷಿಣ, ಉತ್ತತ್ತಿ ಕುರಿತಾದ ನಂಬಿಕೆಗಳು, ಮದುವೆ ಮಂಟಪದಲ್ಲಿ ಹಾಲುಗಂಬ ನೆಡಬೇಕು, ಉಡಿ ತುಂಬಲು ಗೋಧಿ, ಜೋಳ, ಹೆಸರು, ಅಕ್ಕಿ ತೆಂಗು, ಅರಿಷಿಣ, ಎಲೆ ಅಡಿಕೆಗಳನ್ನು ಬಳಸಬೇಕು. ಅಕ್ಷತೆಗಾಗಿ ಜೋಳ ಉಪಯೋಗಿಸಬೇಕು, ಒಂದು ಬೊಡ್ಡೆಗೆ ಎರಡು ಟೊಂಗೆ ಮೇಟಿ ಮಾಡಬೇಕು. ಮದುಮಕ್ಕಳು ಹುಣಸೆ ಗಿಡದ ಕೆಳಗೆ ಹಾಯಬಾರದು, ಕಳ್ಳಿಸಾಲಿನಲ್ಲಿ ದೆವ್ವಗಳಿರುತ್ತವೆ. ಸುಡಗಾಡದಲ್ಲಿರುವ ಗಿಡಗಳನ್ನು ಮನೆಗೆ ತರಬಾರದು, ಅವುಗಳಿಂದ ಮನೆ ಹಾಯಿಸಬಾರದು, ಗೋರಿಯ ಮೇಲೆ ಗಿಡ ನೆಡಬೇಕು, ದುರ್ಮರಣ ಹೊಂದಿದವರನ್ನು ಬೇವಿನ ತಪ್ಪಲಲ್ಲಿ ಇಟ್ಟು ಒಯ್ಯಬೇಕು ಹೀಗೆ ಆಚರಣೆಯ ಹಿನ್ನೆಲೆಯಲ್ಲಿ ಹುಟ್ಟಿದ ನಂಬಿಕೆಗಳು ಸಾಕಷ್ಟಿವೆ.

**ಶುಭವನ್ನು ಸೂಚಿಸುವ ನಂಬಿಕೆಗಳು:**
ನರಿ ಕೂಗುವಾಗ ರಾಶಿ ಅಳೆದರೆ ಹುಲಸು ಆಗುತ್ತದೆ(ಪ್ರಾಣಿ), ಹೆಣ್ಣು ನೋಡಲು ಹೋಗುವಾಗ ಹನ್ನೊಂದು ಬಾಳೆಹಣ್ಣುಗಳು ಇರುವ ಹಣಿಗೆಯನ್ನು ಒಯ್ಯಬೇಕು.(ಸಂಖ್ಯೆ), ಕಾಮಣ್ಣನ ಚೆಂಡು ಯಾವ ದಿಕ್ಕಿಗೆ ಬೀಳುತ್ತದೆ ಆ ದಿಕ್ಕಿಗೆ ಬೆಳೆ ಹುಲಸು ಅಗುತ್ತದೆ(ದಿಕ್ಕು), ಬನ್ನಿ ಗಿಡವನ್ನು ಬಲಕ್ಕೆ ಮಾಡಿಕೊಂಡು ಹೋದರೆ, ಹೋದ ಕೆಲಸ ಆಗುತ್ತದೆ. (ಬಲ), ಕನಸಿನಲ್ಲಿ ಹಣ್ಣು ಕಂಡ್ರೆ ಹೆಣ್ಣು, ಕಾಯಿ ಕಂಡ್ರೆ ಗಂಡು(ಕನಸು) ಮುಂತಾದವು.

**ಅಶುಭವನ್ನು ಸೂಚಿಸುವ ನಂಬಿಕೆಗಳು:**
ಹೆಣ್ಣು ನೋಡಲು ಹೋಗುವಾಗ ಕಟ್ಟಿಗೆ ಹೊರೆ ಎದುರಿಗೆ ಬರಬಾರದು(ವಸ್ತು), ಹೊಲದ ಎಡಕ್ಕೆ ಮಾಡಿ ಬಿತ್ತಬಾರದು(ಎಡ), ನುಗ್ಗೆ ಗಿಡ ಮನೆ ಹತ್ತಿರ ಹಚ್ಚಬಾರದು, ಬಾರೆ ಗಿಡ ಮನೆ ಮುಂದೆ ಇರಬಾರು.

**ಸಸ್ಯ ರಕ್ಷಣೆ ಕುರಿತ ನಂಬಿಕೆಗಳು:**
ಹುಣ್ಣು ಮಕ್ಕಳು ಉಳ್ಳಾಗಡ್ಡಿ ತಿನ್ನಬಾರದು, ಮೇಟಿಗೆ ಬೆನ್ನು ಹಚ್ಚಿ ನಿಲ್ಲಬಾರದು, ಗಿಡ ಹತ್ತಿಸಿದ ಮೇಲೆ ಆತ ಇಳಿಯುವವರೆಗೆ ಬಿಟ್ಟು ಹೋಗಬಾರದು, ಕಸಬರಗೆ ಒದೆಯಬಾರದು. ಅದು ಪಾರ್ವತಿ ಜಡೆಯ ಸಂಕೇತ, ಕಸಬರಗೆ ಗೋಟು ನಿಲ್ಲಿಸಬಾರದು.

**ಧರ್ಮದ ಅಂಜಿಕೆ ಹಾಕುವದರಿಂದ ಹಲವು ನಂಬಿಕೆಗಳು ಹುಟ್ಟಿಕೊಂಡಿವೆ:**
ಹಲಸಿನ ಮರದ ಕೆಳಗೆ ದನಗಳನ್ನು ಕಟ್ಟಿದರೆ ಫಲ ಬಿಡುವುದಿಲ್ಲ, ದೇವರ ಕಂಬವನ್ನು ಒದೆಯಬಾರದು, ಜಾಲಿ ಗಿಡದ ಕೆಳಗೆ ದೀಪ ಹಚ್ಚಿದರೆ ಅಂಗಿ ಕುಲಾಯಿ ಹಾಕಿದರೆ ಬಂಜೆಗೆ ಮಕ್ಕಳಾಗುತ್ತವೆ, ಮನೆ ಮಂದೆ ತಿಪ್ಪರಿಕಾಯಿ ಬಳ್ಳಿ ಹಚ್ಚಿದರೆ ಬಡತನ ಬರುತ್ತದೆ, ನುಗ್ಗಿ ಗಿಡ ಹಚ್ಚಿದರ ನುಗ್ಗ ಅಕ್ಕಾರ, ಜೋಡು ಬಾಳೆಹಣ್ಣು ತಿಂದರೆ ಅವಳಿ-ಜವಳಿ ಮಕ್ಕಳಾಗುತ್ತವೆ.

**ಆರೋಗ್ಯ ಬಗ್ಗೆ ಇರುವ ನಂಬಿಕೆಗಳು:**
ಒಬ್ಬರು ಮುಡಿದ ಹೂವು ಇನ್ನೊಬ್ಬರು ಮುಡಿಯಬಾರದು. ಮುಡಿದರೆ ತಲೆನೋವು ಬರುವುದು, ಮಕ್ಕಳಿಗೆ ನೆದರು ಆದರೆ ಕಸಬರಗೆ, ಬಿದ್ದು ಪೆಟ್ಟಾದರೆ ರೊಟ್ಟಿ ನಿವಾಳಿಸಿ ಒಗೆಯಬೇಕು, ಯುಗಾದಿ ದಿನ ನೀರಿನಲ್ಲಿ ಬೇವಿನ ತಪ್ಲು ಹಾಕಿ ಸ್ನಾನ ಮಾಡಬೇಕು.

**ಸಮಾರೋಪ**
ಹೀಗೆ ಮಾನವನ ಹುಟ್ಟಿನೊಂದಿಗೆ ಈ ನಂಬಿಕೆಗಳು ಹುಟ್ಟಿಕೊಳ್ಳುತ್ತಾ ಸಾಂದರ್ಭಿಕವಾಗಿ ಉಳಿಯುತ್ತಾ ಅಳಿಯುತ್ತಾ ಬದುಕಿನುದ್ದಕೂ

ಪರಂಪರಾಗತವಾಗಿ ಆಚರಣೆಗೊಳ್ಳುತ್ತಾ ಬರುತ್ತಿವೆ. ಮನುಷ್ಯನ ಮನಸ್ಸಿನ ಬೇಕು-ಬೇಡಿಕೆಗಳಿಗೆ ಅನುಗುಣವಾಗಿ ತಾನು ಕಂಡುಕೊಂಡ ವೈಜ್ಞಾನಿಕ ಆವಿಷ್ಕಾರಗಳೊಂದಿಗೆ ನಂಬಿಕೆಗಳು ಇಂದು ಅಸ್ಥಿತ್ವಗೊಳ್ಳುತಿರುವುದ ಕಾಣಬಹುದು. ಒಂದು ಕಾಲದ ಅಪ್ರಸ್ತುತ ನಂಬಿಕೆ ಮತ್ತೊಂದು ಕಾಲಕ್ಕೆ ಪ್ರಸ್ತುತವಾಗ ಬಹುದು ನಿಖರತೆ, ಸ್ಪಷ್ಟತೆಯ ಮೂಲಕ ಅಧ್ಯಯನದ ಪರಿದಿಯಲ್ಲಿ ಈ ನಂಬಿಕೆ ಹೀಗೆ ಎಂದು ಮೌಲ್ಯಮಾಪನ ಮಾಡಿ ಗಟ್ಟಿಗೊಳಿಸಿ ತಿಳಿಸುವುದು ಕಷ್ಟದ ಕೆಲಸ. ಈ ನಂಬಿಕೆಗಳು ಅವರವರ ಮನಸ್ಸಿನ ಆಲೋಚನೆಯ ನೆಲೆಗಟ್ಟಿನ ಮೇಲೆ ನಿಂತಿವೆ, ಹಾಗಾಗಿ ನಂಬಿಕೆಗಳು ಜನಸಾಮಾನ್ಯರ ಸ್ವತ್ತಾಗಿವೆ. ಡಾ.ದೇ.ಜವರೇಗೌಡರು "ನಂಬಿಕೆ ಮಾನವ ಜೀವನದ ಸರ್ವಕ್ಷೇತ್ರಗಳಲ್ಲಿಯೂ ವ್ಯಾಪಿಸಿಕೊಂಡಿದೆ, ಅದೇ ಅವನ ಜೀವನವನ್ನು ರೂಪಿಸುತ್ತದೆ. ಅದೇ ಸಂಸ್ಕೃತಿಯ ತಿರುಳು ಎನ್ನಬಹುದು. ಜಗತ್ತಿನ ಶ್ರೇಷ್ಠ ವಿಜ್ಞಾನಿಗಳು ಸಹ ದಿನ ಬೆಳಗಾದರೆ ನಂಬಿಕೆಗಳನ್ನು ನಂಬುತ್ತಾರೆ." ಎಂದು ಪ್ರತಿಪಾದಿಸುವಂತೆ ನಂಬಿಕೆ ಒಂದು ಸಂಸ್ಕೃತಿಯನ್ನು ರೂಪಿಸುವ ಅನೇಕ ಅಂಶಗಳಲ್ಲಿ ಒಂದಾಗಿದೆ. ನಂಬಿಕೆಗಳನ್ನು ವೈಜ್ಞಾನಿಕ ಅಥವಾ ಇತರ ಶಾಸ್ತ್ರಗಳ ನೆಲೆಯಲ್ಲಿ ಇಟ್ಟು ಚರ್ಚಿಸುವುದಕ್ಕಿಂತ ನಂಬಿಕೆಯನ್ನು ಒಂಧು ಸಂಸ್ಕೃತಿಯ ಸಂದರ್ಭದಲ್ಲಿ ನೋಡುವುದು ಉಚಿತ.

**ಆಕರ ಗ್ರಂಥಗಳು:**


೧. ಜಾನಪದ ಅಧ್ಯಯನ- ಡಾ.ಹಾ.ಮಾ.ನಾಯಕ

೨. ಜನಪದ ನಂಬಿಕೆಗಳು- ಕನ್ನಡ ವಿಶ್ವಕೋಶ ೧೯೭೬ ಮೈ.ವಿ.ವಿ.

೩. ನಮ್ಮ ಜನಪದ ನಂಬಿಕೆಗಳು- ಸಂ.ಜಿ.ವಿ.ದಾಸೇಗೌಡ

೪. ಜಾನಪದ ಸಾಹಿತ್ಯ ದರ್ಶನ-೨೩- ಡಾ.ಎಂ.ಬಿ.ನೇಗಿನಾಳ

೫. ಗ್ರಾಮೀಣ ವಿಕಾಸ - ಜಗನ್ನಾಥ ಜಮಾದಾರ

೬. ಆನ್ವಯಿಕ ಜಾನಪದ - ಡಾ. ಬಿ.ಎ.ವಿವೇಕ ರೈ

೭. ನಮ್ಮ ನಂಬಿಕೆಗಳು _ ಡಾ. ಡಿ.ಕೆ.ರಾಜೇಂದ್ರ

೮. ಕನ್ನಡ ಜನಪದ ನಂಬಿಕೆಗಳು-ಸಂ.ಪ್ರೊ. ವಿವೇಕ ರೈ

೯. ಸುವರ್ಣ ಜಾನಪದ ಲೇಖನಗಳು - ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೧೦.ಉತ್ತರ ಕರ್ನಾಟಕದ ಜನಪದ ನಂಬಿಕೆಗಳು- ಸಂ.ಡಾ.ಮಲ್ಲಕಾರ್ಜುನ ಲಠ್ಠೆ